ಅಖಿಲ ಕರ್ನಾಟಕ
# ಶಿಕ್ಷಕ ಸಮಾಚಾರ
ಸೆಪ್ಟೆಂಬರ್ 2024 ಮಾಸ ಪತ್ರಿಕೆ

ಸಂಪುಟ/Volume : 46
ಸಂಚಿಕೆ/Issue : 12
ಪುಟ/Pages : 12
ಬೆಲೆ/Price : ₹ 15/-

Akhila Karnataka Shikshaka Samachar | September 2024 | Monthly



# ಬೆಂಗಳೂರು ಉತ್ತರ ಮತ್ತು ದಕ್ಷಿಣ ಜಿಲ್ಲೆಗಳ
# ಪ್ರತಿಭಾ ಪುರಸ್ಕಾರ



A Journal of Karnataka Rajya Madhyamika Shikshaka Sangha (R.)

## ಸಂಪಾದಕೀಯ

"ಶಿಕ್ಷಕ ದೇಶ ರಕ್ಷಕ" ಎನ್ನುವ ನುಡಿಗಟ್ಟಿಗೆ ಸಮನಾದ ವ್ಯಕ್ತಿ, ತತ್ವಜ್ಞಾನಿ, ಅಧ್ಯಾಪಕ, ಸಾಮಾಜಿಕ ಚಿಂತಕ, ಶಿಕ್ಷಣ ತಜ್ಞರಾಗಿದ್ದ ಶ್ರೀ ಸರ್ವಪಲ್ಲಿ ರಾಧಾಕೃಷ್ಣನ್‌ರವರು ಈ ದೇಶದ ಸಂವಿಧಾನಾತ್ಮಕವಾದ ಉನ್ನತ ಹುದ್ದೆ ರಾಷ್ಟ್ರಪತಿಯಾಗಿ ಕಾರ್ಯ ಮಾಡಿರುವುದು ದೇಶದ ಹೆಮ್ಮೆಯು ಅಧ್ಯಾಪಕರಾಗಿ ಸೇವೆ ಸಲ್ಲಿಸಿದ್ದು ಮತ್ತು ಅವರು ರಾಷ್ಟ್ರಪತಿಯಾಗಿ ಆಯ್ಕೆಯಾದಾಗ ಅವರ ಶಿಷ್ಯಂದಿರು ಸಾರೋಟಿಯಲ್ಲಿ ಕೂಡಿಸಿ ವಿದ್ಯಾರ್ಥಿಗಳಗೆ ಅದನ್ನು ರಥದಂತೆ ಭಕ್ತಿಯಿಂದ ಎಳೆದುಕೊಂಡು ಮೆರವಣಿಗೆ ಮಾಡಿರುವುದು ಶಿಷ್ಯ ಬಳಗ ಅವರ ಮೇಲಿಟ್ಟಿರುವ ಗೌರವಕ್ಕೆ ಸಾಕ್ಷಿ. ಅಂತಹ ಮಹನೀಯರು ತಮ್ಮ ಜನ್ಮದಿನವನ್ನು 'ಶಿಕ್ಷಕರ ದಿನಾಚರಣೆಯಾಗಿ ಆಚರಿಸಲು ನಿರ್ಧರಿಸಿ ಇಂದು ದೇಶದ ತುಂಬೆಲ್ಲ ಸೆಪ್ಟಂಬರ್-೦೫ನ್ನು "ಶಿಕ್ಷಕ ದಿನಾಚರಣೆ"ಯಾಗಿ ಶಿಕ್ಷಕರ ಸೇವೆಯನ್ನು ಗೌರವದಿಂದ ಸ್ಮರಿಸಲಾಗುತ್ತಿವೆ. ಇಂದು ಬದಲಾದ ಕಾಲಘಟ್ಟದಲ್ಲಿಯೂ ಸಹ ಶಿಕ್ಷಕರ ಪ್ರಾಮಾಣಿಕ ಸೇವೆಯನ್ನು ಸಮಾಜ ಗುರುತಿಸುತ್ತಿದೆ. ಶಿಕ್ಷಕ ವೃತ್ತಿಯಲ್ಲಿ ತಲ್ಲೀನವಾಗಿ, ಶಿಕ್ಷಕರು ವಿದ್ಯಾರ್ಥಿಗಳ ಜೀವನ ರೂಪಿಸುವಲ್ಲಿ ಕಾರಣೀಕರ್ತರಾಗುವ ಶಿಕ್ಷಕರಿಗೆ ಇಂದು ಸಹ ವಿದ್ಯಾರ್ಥಿ ಬಳಗದಲ್ಲಿ ಹೃದಯಾಂತರಾಳದ ಗೌರವವಿದೆ. ಆಧುನಿಕ ತಂತ್ರಜ್ಞಾನದ ಬೆಳವಣಿಗೆಯಲ್ಲಿ ಶಿಕ್ಷಕರಾದ ನಾವು ಸಹ ಇಂದಿನ ಸಮಾಜಕ್ಕೆ ಅವಶ್ಯವೆನಿಸುವ, ತಂತ್ರಜ್ಞಾನ ಮತ್ತು ಬಳಕೆಯ ಜೊತೆಯಲ್ಲಿ ಹೊಸ ವಿಷಯಗಳ ಜ್ಞಾನ ಸಂಪಾದಿಸಿ, ನವ ಭಾರತ ನಿರ್ಮಾಣದಲ್ಲಿ ದೃಢವಾದ ಹೆಜ್ಜೆ ಇಡಲು ವಿದ್ಯಾರ್ಥಿಗಳನ್ನು ತಯಾರಿಸುವ ಹೊಣೆಗಾರಿಕೆ ಶಿಕ್ಷಕರಾದ ನಮ್ಮೆಲ್ಲರ ಮೇಲಿದೆ ಅಲ್ಲವೇ?ಎಲ್ಲ ಶಿಕ್ಷಕ ಬಂಧುಗಳಿಗೂ ಶಿಕ್ಷಕ ದಿನಾಚರಣೆಯ ಶುಭಾಷಯಗಳು.

ಧಾರ್ಮಿಕ ಭಾವನೆಯಲ್ಲಿ ಸ್ವಾತಂತ್ರ್ಯದ ಚಳುವಳಿಯನ್ನು ಜಾಗೃತಗೊಳಿಸುವ ಸದುದ್ದೇಶದಿಂದ ಲೋಕಮಾನ್ಯ ಬಾಲಗಂಗಾಧರ ತಿಲಕರು ಪ್ರಾಚೀನ ಕಾಲದಿಂದಲೂ ಧಾರ್ಮಿಕ ಆಚರಣೆಯಾಗಿದ್ದ ಗಣೇಶ ಚತುರ್ಥಿಯನ್ನು ಯುವಕರ ಮಧ್ಯದಲ್ಲಿ ಹೆಚ್ಚು ಜನಪ್ರಿಯಗೊಳಿಸಿದರು. ಇಂದು ಸ್ವಾತಂತ್ರ ಚಳುವಳಿಯ ಅವಶ್ಯಕತೆ ಇಲ್ಲದಿರಬಹುದು ಆದರೆ ಲಕ್ಷಾಂತರ ದೇಶಭಕ್ತರ ಪ್ರಾಣತ್ಯಾಗದಿಂದ ಗಳಿಸಿದ ಸ್ವಾತಂತ್ರ್ಯವನ್ನು ಉಳಿಸಿಕೊಂಡು ಹೋಗುವ ಮತ್ತು ವಿಕಸಿತ ಭಾರತದ ಮೂಲಕ ಪ್ರಪಂಚದ ಬಲಾಢ್ಯ ಶಕ್ತಿಯಾಗಿಸಿ ಭಾರತವನ್ನು ಎದ್ದುನಿಲ್ಲಿಸುವ ಕಾರ್ಯದ ಗುರಿ ನಮ್ಮೆಲ್ಲರ ಮೇಲಿದೆ. ಅದಕ್ಕಾಗಿ ಸಿದ್ಧಿ ವಿನಾಯಕ ನಮಗೆಲ್ಲ ಶಕ್ತಿಯನ್ನು ಕೊಡಲಿ.

ಪ್ರಾಮಾಣಿಕತೆ, ಸತತ ಪ್ರಯತ್ನ, ದೇಶ ಸೇವೆಯೇ ಮುಖ್ಯ. ಸೇವೆ, ಎಂತಹ ಕಷ್ಟದಲ್ಲಿಯೂ ಸತತ ಶ್ರಮದಿಂದ ಎದ್ದುನಿಲ್ಲಬಹುದು ಎನ್ನುದಕ್ಕೆ ಅವರ ಜೀವನವೇ ಮಾದರಿಯಾಗಿಸಿದ್ದ ಶ್ರೀ ಎಂ ವಿಶ್ವೇಶ್ವರಯ್ಯರವರ ಜನ್ಮದಿನವನ್ನು "ಇಂಜಿನಿಯರ್ ದಿನಾಚರಣೆಯಾಗಿ" ನಾವೆಲ್ಲ ಹೆಮ್ಮೆಯಿಂದ ಆಚರಿಸುವ ಈ ಸಂದರ್ಭದಲ್ಲಿ ಅವರು ಬಿಟ್ಟು ಹೋಗಿರುವ ಆದರ್ಶಗಳನ್ನು ಮೈಗೂಡಿಸಿಕೊಳ್ಳುವ ಮೂಲಕ ಅವರಿಗೆ ಗೌರವ ಸಲ್ಲಿಸಬಹುದಲ್ಲವೇ?

ಸಂಪಾದಕ

## ಸಂಪಾದಕ ಮಂಡಳಿ

ಗೌರವ ಸಂಪಾದಕರು
ಹೆಚ್. ನಾಗಭೂಷಣರಾವ್

ಪ್ರಧಾನ ಸಂಪಾದಕರು ಮತ್ತು ಪ್ರಕಾಶಕರು
ಜೆ. ಎಮ್. ಜೋಶಿ

ವ್ಯವಸ್ಥಾಪಕ ಸಂಪಾದಕರು
ಸಂದೀಪ ಬೂದಿಹಾಳ

ಗೌರವ ಸಲಹೆಗಾರರು
ಚಿದಾನಂದ ಆ. ಪಾಟೀಲ
ಮಮತಾ ಡಿ. ಕೆ.

ಸಂಪಾದಕ ಮಂಡಳಿ
ಎನ್. ನಾಗರಾಜ್
ನಂ. ನಾಗಲಕ್ಷ್ಮಿ
ಸೀತಾಲಕ್ಷ್ಮಿ ಆರ್.

ವಿನ್ಯಾಸಕಾರರು
ಪ್ರೇರಣಾ

ಕಛೇರಿ ವ್ಯವಸ್ಥಾಪಕರು
ವರಲಕ್ಷ್ಮಿ ಕೆ. ಎನ್.

## ಪರಿವಿಡಿ

- ಬೆನ್ನು ತಟ್ಟಿ ಬೆಳೆಸಿದ ಗುರುಗಳು – ಹೆಚ್ ನಾಗಭೂಷಣ್ ರಾವ್ 3
- ಗಣೇಶ ಮತ್ತು ಶಿಕ್ಷಣ – ಡಾ|| ಲೋಕೇಶ್ 4
- ನಿವೃತ್ತ ಶಿಕ್ಷಕರ ಕಾರ್ಯಶ್ಲಾಘನೆ ಹಾಗೂ ಶುಭಕೋರಿಕೆ – ಗಂಗಾಧರಾಚಾರಿ, ಗಂಗಪ್ಪ 5
- ಪ್ರತಿಭಾ ಪುರಸ್ಕಾರ-ಬೆಂಗಳೂರು ಉತ್ತರ ಜಿಲ್ಲೆ 7
- 37ನೇ ವರ್ಷದ ಪ್ರತಿಭಾ ಪುರಸ್ಕಾರ ಸಮಾರಂಭ 8
- ಕ.ರಾ.ಮಾ.ಶಿ.ಸಂಘ(ರಿ.) ಬೆಂಗಳೂರು, ಕಾರ್ಯಕಾರಣಿ & ಸಾಮಾನ್ಯ ಸಭೆ 9
- ಗುರುವಂದನಾ –ಬೆಂಗಳೂರು ಉತ್ತರ ಜಿಲ್ಲೆ 10
- ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ರಘು ಕೊಡುಗೆ ಅಪಾರ: ಕೇಂದ್ರ ಸಚಿವ ಶ್ರೀ ಪ್ರಲ್ಹಾದ್ ಜೋಶಿ 11
- ಚಿತ್ರ ಸುದ್ದಿ 12

# ಬೆನ್ನು ತಟ್ಟಿ ಬೆಳೆಸಿದ ಗುರುಗಳು

**(ನಮ್ಮ ಸಂಸ್ಕೃತಿಯಲ್ಲಿ ಗುರುವಿನ ಸ್ಥಾನ ಬಹು ಪೂಜನೀಯವಾದುದು. ಮಾತಾಪಿತೃಗಳ ನಂತರದ ಪವಿತ್ರವಾದ ಸ್ಥಾನವನ್ನು ಗುರುವಿಗೆ ಕೊಟ್ಟಿರುವ ಪರಂಪರೆ ನಮ್ಮದು. ಅದಕ್ಕೇ ಆಚಾರ್ಯದೇವೋಭವ ಎನ್ನುತ್ತೇವೆ. ಪ್ರತಿಯೊಬ್ಬರ ಜೀವನದಲ್ಲಿ ಈ ಗುರುವಿನ ಮಾರ್ಗದರ್ಶನ ಬಹಳ ಮುಖ್ಯವಾಗಿರುತ್ತದೆ. ಅವರು ಸದಾಕಾಲಕ್ಕೂ ಸ್ಮರಣೀಯರು. ಶಿಕ್ಷಕರ ದಿನಾಚರಣೆಯ ಸಂದರ್ಭದ ಪ್ರಯುಕ್ತ ಈ ಲೇಖನ.)**

**ಹೆಚ್. ನಾಗಭೂಷಣ್ ರಾವ್**
**ಪೋಷಕರು**
**ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ**



ಅದೊಂದು ಶಿಕ್ಷಕ ವೃತ್ತಿಗೆ ಸಂಬಂಧ ಪಟ್ಟ ಪುಸ್ತಕ. ಓದುತ್ತಾ ಸಾಗಿದಂತೆ ಥಟ್ಟನೆ ನನ್ನ ಹೈಸ್ಕೂಲ್ ಗುರುಗಳಾಗಿ ಶ್ರೀ ಕೆ. ಭೀಮಾಚಾರ್ ನೆನಪಾದರು. ಇಲ್ಲಿ ಶಿಕ್ಷಕರು ಎಂಬ ಪದ ಬಳಸದೆ ಬೇಕೆಂದೇ 'ಗುರು' ಶಬ್ದ ಬಳಸಿದ್ದೇನೆ. ಕಾರಣ 'ಶಿಕ್ಷಕ' ಕೇವಲ ಬುದ್ದಿಗೆ ಪಾಠ ಹೇಳುತ್ತಾನೆ ಆದರೆ 'ಗುರು'ಹೃದಯ ತಟ್ಟಿ ಶಿಷ್ಯನ ಕಣ್ತೆರೆಸುತ್ತಾನೆ.

ಇದು ನನ್ನ ಜೀವನದಲ್ಲಿ ನಡೆದ ಘಟನೆ. ಅದೂ ನಾನು ಹೊಳೇನರಸೀಪುರದಲ್ಲಿ ಮುನಿಸಿಪಲ್ ಹೈಸ್ಕೂಲಿನಲ್ಲಿ ಹತ್ತನೇ ತರಗತಿ ಓದುತ್ತಿದ್ದ ಕಾಲದಲ್ಲಿ. ಇಲ್ಲಿ ಶ್ರೀ ಕೆ ಭೀಮಾಚಾರ್ ಅವರ ಬಗ್ಗೆ ವಿವರಣೆ ಕೊಡಲೇಬೇಕು. ಬಿಳೀ ಕಚ್ಚೆ ಪಂಚೆ ಬಿಳೀ ಜುಬ್ಬ. ಸಾಧಾರಣ ಮೈಕಟ್ಟು, ಹಸನ್ಮುಖ, ಮೃದುವಾದ ದನಿ. ಮೊದಲ ದಿನ ಅವರು ತರಗತಿಗೆ ಬಂದವರೇ ವಿದ್ಯಾರ್ಥಿಗಳೇ ಕುಳಿತುಕೊಳ್ಳಿ ಎಂದು ಮಾತನ್ನು ಪ್ರಾರಂಭಿಸಿ "ನನ್ನೂರು ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ. ನನ್ನ ಹೆಸರು ಕೆ ಭೀಮಾಚಾರ್, ನನ್ನ ವೇಷ ನೋಡಿ ನೀವು ಕನ್ನಡ ಶಿಕ್ಷಕನೆಂದು ಊಹಿಸಿರಬಹುದು. ಆದರೆ ನಾನು ವಿಜ್ಞಾನದ ಶಿಕ್ಷಕ. ನಿಮ್ಮ ತರಗತಿಗೆ ಭೌತಶಾಸ್ತ್ರವನ್ನು ಬೋಧಿಸುತ್ತೇನೆ". ಎನ್ನುತ್ತಾ ಅಂದಿನ ಪಾಠವನ್ನು ವಿವರಿಸುತ್ತಾ, ಕಪ್ಪು ಹಲಗೆಯ ಮೇಲೆ ದುಂಡಾದ ಅಕ್ಷರಗಳಿಂದ ಅಂದಿನ ಪಾಠದ ವಿಷಯವನ್ನು ಸಂಗ್ರಹ ರೂಪದಲ್ಲಿ ಬರೆದರು. ನನಗಂತೂ ಅವರ ಅಂದಿನ ಬೋಧಿಸಿದ ರೀತಿ, ತರಗತಿಯ ಎಲ್ಲ ಬೆಂಚುಗಳ ಬಳಿ ಹೋಗಿ ಪರೀಕ್ಷಿಸಿದ ಬಗೆ ಇಂದಿಗೂ ನೆನಪಿನಲ್ಲಿ ಅಚ್ಚಳಿಸದಂತಿದೆ.

ಈಗ ನಾನು ಪುಸ್ತಕ ವಿಷಯಕ್ಕೆ ಬರುತ್ತೇನೆ. ಪ್ರಾಯಶಃ ಜನವರಿ ತಿಂಗಳಿರಬಹುದು, ಕೆ ಭೀಮಾಚಾರ್ ತರಗತಿಗೆ ಬಂದವರೇ ಮುಂದಿನ ಶನಿವಾರ, ಭಾನುವಾರ ಜಿಲ್ಲಾ ಕೇಂದ್ರದಿಂದ ಹಾಸನದಲ್ಲಿ ಅಂತರ ಪ್ರೌಢಶಾಲಾ ಚರ್ಚಾ ಸ್ಪರ್ಧೆ ಏರ್ಪಾಡಾಗಿದೆ. ಚರ್ಚೆ ಕನ್ನಡ ಹಾಗೂ ಇಂಗ್ಲೀಷ್ ಎರಡೂ ಭಾಷೆಗಳಲ್ಲಿ ಇರುತ್ತದೆ. ಕನ್ನಡ ಚರ್ಚೆಗೆ ಭಾಗವಹಿಸಲು ನಿನ್ನನ್ನು ಆರಿಸಿದ್ದೇನೆ ಎಂದು ನನ್ನತ್ತ ತಿರುಗಿ ಹೇಳಿದರು. ನನಗೆ ಆಗಲೇ ಎದೆಯಲ್ಲಿ ಢವಢವ ಶುರುವಾಯಿತು. ಎದ್ದು ನಿಂತು ನನಗೆ ವಾದ ಮಾಡಲು ಸಭಾಕಂಪನ ಆಗುತ್ತದೆ. ಆದ್ದರಿಂದ ಬೇರೆ ಯಾರನ್ನಾದರೂ ಆರಿಸಿ ಸಾರ್ ಎಂದು ಗೋಗರೆದೆ. ಆದರೆ ಕೆ.ಬಿ ಮೇಷ್ಟ್ರು ಅವರ ನಿರ್ಧಾರವನ್ನು ಬದಲಿಸಲೇ ಇಲ್ಲ. ನೀನು ಕನ್ನಡದ ಮಾಧ್ಯಮದ ತರಗತಿಗೆ ಮೊದಲಿಗನಾಗಿದ್ದೀಯ, ನಿನ್ನ ಕನ್ನಡ ಮಾತನಾಡುವುದು ಚೆನ್ನಾಗಿದೆ. ಅದಕ್ಕಾಗಿ ನೀನೇ ಈ ಸ್ಪರ್ಧೆಯಲ್ಲಿ ಭಾಗವಹಿಸಬೇಕೆಂದು ನಿರ್ಧಾರದ ಧ್ವನಿಯಲ್ಲಿ ಹೇಳಿದರು.

ಸ್ಪರ್ಧೆಗೆ ಮೂರೇ ದಿನ ಉಳಿದಿತ್ತು. ನನಗೆ ಚರ್ಚಾ ವಿಷಯದ ಪರವಾಗಿ ಮಾತನಾಡುವ ತರಬೇತಿಯನ್ನು ಅವರೇ ನೀಡಿದರು. ಸ್ಪರ್ಧೆಯ ದಿನವೂ ಬಂತು. ಅದರ ಹಿಂದಿನ ದಿನವೇ ನಾವು ಜಿಲ್ಲಾ ಕೇಂದ್ರವನ್ನು ತಲುಪಿದೆವು. ನಮ್ಮ ವಾಸ್ತವ್ಯಕ್ಕೆ ಒಂದು ಶಾಲೆಯನ್ನು ವ್ಯವಸ್ಥೆ ಮಾಡಿದ್ದರು. ಹಾಸನದ ಇಂದಿನ ಬಸ್ ನಿಲ್ದಾಣದ ಜಾಗದಲ್ಲಿ ಒಂದು ವಿಶಾಲ ಸಭಾ ಮಂಟಪ, ಎತ್ತರದ ವೇದಿಕೆ, ವೇದಿಕೆಯ ಕೆಳಭಾಗದಲ್ಲಿ ಜಿಲ್ಲೆಯ ಎಲ್ಲಾ ಪ್ರೌಢಶಾಲೆಗಳಿಂದ ವಿದ್ಯಾರ್ಥಿಗಳಿಗೆ ಆಸನದ ವ್ಯವಸ್ಥೆ. ಕೆ. ಭೀ ಅವರೊಂದಿಗೆ ನಮ್ಮ ಹತ್ತು ಜನರ ತಂಡ. ಎಂಟನೇ ಸಾಲಿನಲ್ಲಿ ಕೂತಿದ್ದೆವು. ಮೊದಲ ದಿನ ಬೆಳಗಿನಿಂದ ಸಂಜೆಯವರೆಗೆ ವಿವಿಧ ಸ್ಪರ್ಧೆಗಳು ನಡೆದುವು. ಮರುದಿನ ಮಧ್ಯಾಹ್ನದವರೆಗೆ ಉಳಿದ ಸ್ಪರ್ಧೆಗಳು. ಭೋಜನ ವಿರಾಮದ ನಂತರ ಬಹುಮಾನ ವಿತರಣಾ ಸಮಾರಂಭ.

ಅಂದು ಬೆಳಿಗ್ಗೆ 10 ಗಂಟೆಗೆ ಕನ್ನಡ ಚರ್ಚಾಸ್ಪರ್ಧೆ ಪ್ರಾರಂಭವಾಯಿತು. ನನ್ನ ಸರದಿ ಬಂದಾಗ ನಾನು 8ನೇ ಸ್ಪರ್ಧಿ. ನಿರ್ವಾಹಕರು ನನ್ನ ಶಾಲೆ ಹಾಗೂ ನನ್ನ ಹೆಸರನ್ನು ಕೂಗಿದರು. ನಾನು ಕೆ.ಭೀ ಅವರ ಪಕ್ಕದಲ್ಲೇ ಕೂತಿದ್ದೆ. ಅವರು ನನ್ನ ಬೆನ್ನುತಟ್ಟಿ "ಹೋಗು ಗೆದ್ದು ಬಾ" ಎಂದು ಪ್ರೋತ್ಸಾಹದ ಮಾತನಾಡಿದರು. ನಾನು ನಿಧಾನವಾಗಿ ನಡೆದು 6 ಮೆಟ್ಟಿಲಿದ್ದ ವೇದಿಕೆಯನ್ನೇರಿ ಮೈಕ್ ಅನ್ನು ಸರಿಮಾಡಿಕೊಂಡೆ. ಕಣ್ಣೆತ್ತಿ ನೋಡಿದರೆ ಸಭಾಮಂಟಪದಲ್ಲಿ ನೂರಾರು ಜನ. ವೇದಿಕೆಯ ಪಕ್ಕದಲ್ಲಿ ತೀರ್ಪುಗಾರರ ತಂಡ. ನನಗೆ ಕೈಕಾಲು ನಡುಕ ಪ್ರಾರಂಭವಾಯ್ತು. ಆದರೂ ಸಾವರಿಸಿಕೊಂಡು "ತೀರ್ಪುಗಾರರೇ, ನನ್ನ ಸಹಸ್ಪರ್ಧಿಗಳೇ, ಹಿರಿಯರೇ: ಎಂದು ಹೇಳುವಷ್ಟರಲ್ಲಿ ಹಣೆ ತುಂಬಾ ಬೆವರು. ಮುಂದೆ ಮಾತೇ ಹೊರಡಲಿಲ್ಲ. ಸತ್ತೆನೋ ಬಿದ್ದೆನೋ ಎಂದು ವೇದಿಕೆ ಇಂದ ಹೊರಟು ಬಾಣದ ವೇಗದಲ್ಲಿ ಓಡಿ ಬಂದು ನನ್ನ ಜಾಗದಲ್ಲಿ ಕುಕ್ಕರಿಸಿದೆ. ಶಾಲೆಗೆ ನನ್ನಿಂದಾದ ಅವಮಾನ ಕಾಡ ತೊಡಗಿತು. "ಸಾರ್ ಕ್ಷಮಿಸಿ' ಎನ್ನುವಷ್ಟರಲ್ಲಿ ಮಡುಗಟ್ಟಿದ ದುಃಖ ಕಟ್ಟೆಯೊಡೆದು ಕಣ್ಣೀರ ಧಾರೆಯಾಗಿ ಹರಿಯಿತು, ತಲೆತಗ್ಗಿಸಿ ಕುಳಿತಿದ್ದೆ.

ಇಷ್ಟಾದರೂ ನನ್ನ ಗುರುಗಳಾದ ಪೂಜ್ಯ ಭೀಮಾಚಾರ್ 'ಯಾಕಪ್ಪ ಅಳ್ತೀಯ, ಎಷ್ಟು ಚೆನ್ನಾಗಿ ನಾಲ್ಕು ಶಬ್ದ ಮಾತನಾಡಿದೆ" ಎಂದರು. ಮೌನವಾಗಿದ್ದ ಅಳು ಬಿಕ್ಕುವಂತಾಯಿತು. ನನ್ನ ಕೈಯನ್ನು ಗಟ್ಟಿಯಾಗಿ ಹಿಡಿದುಕೊಂಡ ಕೆ.ಭೀ ಅವರು "ಅಲ್ಲಯ್ಯಾ, ನಿನ್ನ ಹೆಸರು ಕರೆದಾಗ ಧೈರ್ಯವಾಗಿ ಎದ್ದು ಹೋದೆ, ವೇದಿಕೆ ಏರಿ ಸ್ಪಷ್ಟವಾಗಿ ಎರಡು ವಾಕ್ಯ ಹೇಳಿದೆ. ಅದೇ ನೋಡು ನಿನಗಿಂತ ಮುಂಚೆ ಹೆಸರು ಕರೆದ ಇಬ್ಬರು ಕುಳಿತಲ್ಲಿಂದ ಕದಲಿಲ್ಲ. ಇನ್ನೊಬ್ಬ ವೇದಿಕೆ ಹತ್ತದೇ ಓಡಿಬಂದ. ಮತ್ತೊಬ್ಬ ವೇದಿಕೆ ಏರಿದರು ಮೈಕ್‌ವರೆಗೆ ಹೋಗಿ ಏನೂ ಮಾತನಾಡದೆ ಓಡಿಬಂದ. ಅವರಿಗಿಂತ ನೀನು ವಾಸಿ ಅಲ್ಲವೇ? ಧೈರ್ಯವಾಗಿ ಹೋದೆ ವೇದಿಕೆ ಏರಿದೆ, 2 ವಾಕ್ಯ ಮಾತನಾಡಿದೆ. ಮೊದಲ ಸಲ ವೇದಿಕೆ ಏರಿದಾಗ ಹೀಗಾಗುವುದು ಅತ್ಯಂತ ಸಹಜ, ನಿನ್ನ ನಾಚಿಕೆ ಬಿಡು" ಎಂದು ಧೈರ್ಯ ತುಂಬಿದರು. ಶಾಲೆಯಲ್ಲಿ ಇತರ ಬಹುಮಾನಿತರ ಜತೆ ನನ್ನನ್ನೂ ನಿಲ್ಲಿಸಿ ಎಲ್ಲರನ್ನೂ ಹೊಗಳಿದರು.

ಅಂದು ಅವರೇನಾದರೂ "ದಡ್ಡ ನಿನ್ನನ್ನು ಆರಿಸಿದ್ದು ನನ್ನದೇ ತಪ್ಪು. ಶಾಲೆಯ ಮಾನ ಕಳೆದೆ" ಎಂದು ಛೀಮಾರಿ ಹಾಕಿದ್ದರೆ ಇಂದು ನಾನು ಭಾಷಣ ಮಾಡಲು ಬಾರದ ಮೂಕನಾಗುಳಿಯುತ್ತಿದ್ದೆ. ●

# ಗಣೇಶ ಮತ್ತು ಶಿಕ್ಷಣ




**ಡಾ|| ಲೋಕೇಶ್**
**ಮುಖ್ಯಸ್ಥರು & ಸಂಯೋಜನಾಧಿಕಾರಿಗಳು**
**'ಶಿಕ್ಷಣ ವಿಭಾಗ', NMKRV ಮಹಿಳಾ ಕಾಲೇಜು, ಜಯನಗರ 3ನೇ ಬ್ಲಾಕ್, ಬೆಂಗಳೂರು**


ಭಾರತದ ಸನಾತನ ಪರಂಪರೆಯಲ್ಲಿ ಅವಿಚ್ಛಿನ್ನವಾಗಿ ಆರಾಧಿಸಲ್ಪಡುತ್ತಿರುವ ದೇವರುಗಳಲ್ಲಿ ಗಣೇಶನಿಗೆ ವಿಶೇಷ ಅಗ್ರಗಣ್ಯ ಸ್ಥಾನವನ್ನು ಕಲ್ಪಿಸಲಾಗಿದೆ. ಹಿಂದೂಗಳಂತೆ ಬೌದ್ಧರು ಸಹ ಗಣೇಶನನ್ನು ಆರಾಧಿಸುವುದಕ್ಕೆ ಸಾಕ್ಷಿಗಳಿವೆ. ಭಾರತ ಮಾತ್ರವಲ್ಲದೆ ಟಿಬೇಟ್, ಚೀನಾ ಮತ್ತು ಜಪಾನ್‌ಗಳಲ್ಲೂ ಗಣೇಶನಿಗೆ ಪೂಜೆ ಸಲ್ಲಿಸಲಾಗುತ್ತಿದೆ. ಹಿಂದೂ ಧಾರ್ಮಿಕ ವಿಧಿ ವಿಧಾನಗಳಲ್ಲಿ ಸಲ್ಲುವ ಅಗ್ರಪೂಜೆ ಗಣೇಶನಿಗೆ ಮೀಸಲಾಗಿರುತ್ತದೆ.

ಪುರಾಣಗಳ ಪ್ರಕಾರ 'ಶಿವ' ಮತ್ತು ಪಾರ್ವತಿ ದೇವಿಯ ಮಾನಸ ಪುತ್ರನೇ ಗಣೇಶ ಹಾಗೂ ಕಾರ್ತಿಕೇಯ, ಈತನ ಸಹೋದರ. ಗಣೇಶನ ವಿಶೇಷ ಗುಣವಿಶೇಷಗಳಲ್ಲಿ ಗಮನ ಸೆಳೆಯುವಂತದ್ದು, ಶಿಕ್ಷಣ ಮತ್ತು ಗಣೇಶನಿಗಿರುವ ಅವಿನಾಭಾವ ಸಂಬಂಧವನ್ನು ಹಲವಾರು ಅಂಶಗಳ ಮೂಲಕ ಅರ್ಥೈಸಬಹುದು.

'ವಿದ್' ಎಂಬುದು ಮೂಲತಃ ಸಂಸ್ಕೃತ ಪದವಾಗಿದ್ದು ಇದರರ್ಥ 'ಜ್ಞಾನ' ಎಂಬುದಾಗಿದೆ. ಆದ್ದರಿಂದ 'ವಿದ್' ಪದವನ್ನು 'ಶಿಕ್ಷಣ' ಪದದ ಸಂವಾದಿಯಾಗಿ ಬಳಸಲಾಗುತ್ತದೆ. ಶಿಕ್ಷಣವೆಂದರೆ ಜ್ಞಾನ, ವಿದ್ಯೆ ಎಂಬ ಸಮಾನಾರ್ಥಕ ಪದಗಳಿಂದ ಸಂಭೋದಿಸಲಾಗುತ್ತದೆ. ವಿದ್ಯೆಯ ಅಧಿದೇವನಾಗಿ ಗಣಪತಿಯನ್ನು ಪೂಜಿಸಲಾಗುತ್ತದೆ. ಈ ಕಾರಣದಿಂದ ಆತನನ್ನು 'ವಿದ್ಯಾಗಣಪತಿ' ಎನ್ನಲಾಗುತ್ತದೆ. ಪುರಾಣಗಳಲ್ಲಿ ಉಲ್ಲೇಖಿಸಿದಂತೆ ಗಣಪತಿ 'ಬುದ್ಧಿ ಮತ್ತು 'ಜ್ಞಾನಕ್ಕಿರುವ ಪರ್ಯಾಯ ರೂಪವೇ ಆಗಿದ್ದಾನೆ. ಕುಂಡಲೀನಿ ಯೋಗದ ಪ್ರಕಾರ ಮನುಷ್ಯನಲ್ಲಿರುವ ಏಳು ಚಕ್ರಗಳಲ್ಲಿ ಒಂದಾದ ಮೂಲಾಧಾರ ಚಕ್ರವು ವಾಸ್ತವದಲ್ಲಿ ಜ್ಞಾನದ ಆಕರವಾಗಿದೆ. ಮೂಲಾಧಾರ ಚಕ್ರವು ಜಾಗೃತವಾದರೆ ಉಳಿದ ಚಕ್ರಗಳು ಸಹ ಜಾಗೃತವಾಗುತ್ತವೆ. ಮೂಲಧಾರ ಚಕ್ರವು ಜ್ಞಾನದ ಶಕ್ತಿ ಕೇಂದ್ರವಾಗಿರುವುದರಿಂದ ಇದು ಗಣಪತಿಯ ವಾಸಸ್ಥಾನವಾಗಿದೆ. ಆದ್ದರಿಂದ ಜ್ಞಾನ, ವಿವೇಕ, ಬುದ್ಧಿವಂತಿಕೆ, ಕಲಿಕೆ ಅಧ್ಯಯನ ಇವುಗಳ ಪರಬ್ರಹ್ಮ ಸ್ವರೂಪ ಗಣೇಶನೇ ಆಗಿದ್ದಾನೆ.

ಭಾರತೀಯ ಸನಾತನ ಸಾಹಿತ್ಯ ಪರಂಪರೆಯಲ್ಲಿ ಉಲ್ಲೇಖವಾಗಿರುವ 14 ವಿದ್ಯೆ ಮತ್ತು 64 ಕಲೆಗಳ ಅಧಿಪತಿಯೇ 'ಗಣೇಶ' ಎನ್ನಲಾಗಿದೆ. 04 ವೇದ, 06 ಅಂಗಗಳ 'ಮೀಮಾಂಸೆ', ನ್ಯಾಯ 'ಪುರಾಣ' ಮತ್ತು 'ಧರ್ಮಶಾಸ್ತ್ರ'ಗಳ ಒಡೆಯ ಗಣೇಶನಾಗಿದ್ದಾನೆ. ಗಣೇಶ ತನ್ನ ವಿವೇಕ ಮತ್ತು ಬುದ್ಧಿವಂತಿಕೆಯಿಂದ ಗಣಗಳ ಒಡೆಯ ಎನಿಸಿದ್ದಾನೆ. ವಿದ್ಯಾರ್ಥಿಗಳು ಮತ್ತು ವಿದ್ವಾಂಸರು ತಮ್ಮ ಕಲಿಕೆ, ಶಿಕ್ಷಣ ಮತ್ತು ವಿವೇಕಕ್ಕೆ ಆರಾಧಿಸುವ ದೈವನಾಗಿ ಗಣೇಶ ಗುರುತಿಸಲ್ಪಟ್ಟಿದ್ದಾನೆ. ಗಣೇಶನ ಬುದ್ಧಿವಂತಿಕೆ, ಸ್ಮರಣಾ ಸಾಮರ್ಥ್ಯ, ಕಲಿಕಾ ಸಾಮರ್ಥ್ಯ ನಮಗೂ ಲಭಿಸಲಿ ಎಂಬ ಕಾರಣಕ್ಕೆ ವಿದ್ಯಾರ್ಥಿಗಳು ಮತ್ತು ವಿದ್ವಾಂಸರು ಈತನಿಗೆ ಸದಾ ತಲೆಬಾಗುತ್ತಾರೆ.

ಗಣೇಶನ ಅತ್ಯುನ್ನತ ಗುಣವಿಶೇಷಣಗಳಾದ ಅನಂತ ಜ್ಞಾನ, ಬುದ್ಧಿ, ವಿವೇಕ, ಸಮಯ ಪ್ರಜ್ಞೆ, ಸವಾಲುಗಳನ್ನು ಸ್ವೀಕರಿಸಿ ಪರಿಹಾರ ನೀಡಬಲ್ಲ ಏಕೈಕ ದೈವವೇ ಗಣೇಶನಾಗಿದ್ದಾನೆ. ಮೇಲ್ಕಂಡ ಎಲ್ಲಾ ಅಂಶಗಳನ್ನು ಪುಷ್ಟೀಕರಿಸುವ ಪ್ರಸಂಗಗಳು ಈ ರೀತಿ ಇವೆ.

**ಪ್ರಸಂಗ–01 :** ಗಣೇಶ ಮತ್ತು ಸಹೋದರ ಕಾರ್ತಿಕೇಯ ಕಾಡಿನಲ್ಲಿ ಒಟ್ಟಿಗೆ ಆಟವಾಡುತ್ತಿರುವ ಸಂದರ್ಭದಲ್ಲಿ ಒಂದು ವಿಶೇಷ ಹಣ್ಣನ್ನು ಒಮ್ಮೆಲೆ ಕಂಡರು ಹಾಗೂ ಅದನ್ನು ಒಟ್ಟಿಗೆ ಹಿಡಿದುಕೊಂಡರು. ಅದನ್ನು ಪರಸ್ಪರ ಹಂಚಿಕೊಳ್ಳಲು ನಿರಾಕರಿಸಿದರು ಹಾಗೂ ಹಣ್ಣು ನನ್ನದು ಎಂದು ಪರಸ್ಪರ ಜಗಳಕ್ಕೆ ಇಳಿದರು. ಕೈಲಾಸಕ್ಕೆ ಹಿಂದಿರುಗಿ ನಂತರ ಶಿವನಿಗೆ ಎಲ್ಲವನ್ನು ಅರುಹಿದರು. ಸಮಸ್ಯೆ ಬಗೆಹರಿಸಲು ಶಿವನು ಇಬ್ಬರಿಗೂ ಒಂದು ಪರೀಕ್ಷೆಯ ಸ್ಪರ್ಧೆಯನ್ನು ನೀಡಿದನು. ಆ ಸ್ಪರ್ಧೆಯೇನೆಂದರೆ ಜಗತ್ತನ್ನು ಮೂರು ಬಾರಿ ಪ್ರದಕ್ಷಿಣೆಯನ್ನು ಯಾರೂ ಮೊದಲಿಗೆ ಪೂರೈಸುವರೋ ಅವರಿಗೆ ಈ ಹಣ್ಣು ನೀಡುವುದಾಗಿ ತಿಳಿಸಿದರು. ತಕ್ಷಣ ಕಾರ್ತಿಕೇಯ ತನ್ನ ವಾಹನವಾದ ನವಿಲಿನ ಮೇಲೆ ಪ್ರದಕ್ಷಿಣೆಗೆ ಹೊರಟನು. ಏತನ್ಮಧ್ಯೆ ಗಣೇಶನ ವಾಹನವಾದ ಇಲಿ ಅತ್ಯಂತ ಚಿಕ್ಕಪ್ರಾಣಿ ಅದರ ಮೇಲೆ ಪ್ರಯಾಣಿಸಿ ಜಗತ್ತನ್ನು ಮೂರು ಬಾರಿ ಪ್ರದಕ್ಷಿಣೆ ಅಸಾಧ್ಯ ಎಂದು ತಿಳಿದ ಗಣೇಶ ಸ್ವಲ್ಪ ಹೊತ್ತು ಆಲೋಚಿಸಿ ತನ್ನ ತಂದೆ, ತಾಯಿಯನ್ನೇ 3 ಸುತ್ತು ಪ್ರದಕ್ಷಿಣೆಗೈದ. ಶಿವನು ಗಣೇಶನ ಈ ನಡೆಯನ್ನು ಪ್ರಶ್ನಿಸಿದಾಗ ಗಣೇಶನ ಬುದ್ಧಿವಂತಿಕೆಯ ಉತ್ತರ ಎಷ್ಟು ಅರ್ಥಗರ್ಭಿತವಾಗಿತ್ತು ಅಂದರೆ ತಂದೆ ತಾಯಿಯೇ ನನಗೆ ನಿಜವಾದ ಪ್ರಪಂಚ, ನಿಮ್ಮನ್ನು ಮೂರು ಸುತ್ತು ಪ್ರದಕ್ಷಿಣೆ ಮಾಡಿದರೆ ಅದು ಮೂರು ಸುತ್ತು ಜಗತ್ತನ್ನು ಪ್ರದಕ್ಷಿಣೆ ಮಾಡಿದ ಹಾಗೆ ಎಂದನು. ಗಣೇಶನ ಉತ್ತರದಿಂದ ಪ್ರಸನ್ನನಾದ ಪರಶಿವ ಹಣ್ಣನ್ನು ಗಣೇಶನಿಗೆ ನೀಡಿದನು. ಹಣ್ಣನ್ನು ಪಡೆದ ಗಣೇಶ ಅಮರತ್ವ ಮತ್ತು ಜ್ಞಾನವನ್ನು ಪಡೆದುಕೊಂಡನು. ಈ ಪ್ರಸಂಗದಿಂದ ತಿಳಿಯುವ ನೀತಿಯೇನೆಂದರೆ ಬುದ್ಧಿವಂತಿಕೆಯಿಂದ ಎಂತಹ ಸವಾಲುಗಳನ್ನಾದರೂ ಸ್ವೀಕರಿಸಿ ಗೆಲ್ಲಬಹುದು ಹಾಗೂ ನಮ್ಮನ್ನು ಹೆತ್ತ ತಂದೆ– ತಾಯಿಗಳಿಗೆ ಅರ್ಹವಾದ ಮೊದಲ ಪ್ರೀತಿಪೂರ್ವಕ ಗೌರವ ನೀಡಬೇಕು ಎಂಬುದು ತಿಳಿಯುತ್ತದೆ.

**ಪ್ರಸಂಗ–02:** ಮಹಾಭಾರತ ಮಹಾಕಾವ್ಯ ವೇದ ವ್ಯಾಸರ ಕನಸಿನ ಸೃಷ್ಟಿಯಾಗಿತ್ತು. ಆದರೆ ಇಂತಹ ಮಹಾಕಾವ್ಯವನ್ನು ಬರೆಯುವ ಸಾಮರ್ಥ್ಯವಿರುವುದು ಗಣೇಶನಿಗೆ ಮಾತ್ರ! ಗಣೇಶ ಮತ್ತು ವೇದ ವ್ಯಾಸರ ನಡುವಿನ ಷರತ್ತು ಏನೆಂದರೆ ವ್ಯಾಸರು ನಿರಂತರವಾಗಿ ನಿರೂಪಿಸುವುದು ಹಾಗೂ ಗಣೇಶ ಯಾವುದೇ ಅಡೆತಡೆಯಿಲ್ಲದೆ ಬರೆಯಬೇಕು ಎಂಬುದು ಇಬ್ಬರು ಒಪ್ಪಿ ಮಹಾಕಾವ್ಯದ ಸೃಷ್ಟಿ ಆರಂಭವಾಯಿತು. ವೇದವ್ಯಾಸರು ನಿರಂತರವಾಗಿ ನಿರೂಪಿಸಲು ಪ್ರಾರಂಭಿಸಿದರು, ಅದನ್ನು ಗಣೇಶ ಬರೆಯಲು ಪ್ರಾರಂಭಿಸಿದ. ಹೀಗೆ ಸ್ವಲ್ಪ ಸಮಯ ಸಾಗಿದ ನಂತರ ಗಣೇಶನ ಲೇಖನಿಯ ತುದಿ ಮುರಿದುಹೋಯಿತು. ಆಗ ಗಣೇಶ ಸಮಯ ವ್ಯರ್ಥಮಾಡದೆ ತನ್ನದೇ ಒಂದು ದಂತವನ್ನು ಲೇಖನಿಯನ್ನಾಗಿ ಮಾಡಿಕೊಂಡು ಯಾವುದೇ ಅಡೆತಡೆಯಿಲ್ಲದೆ ಮಹಾಕಾವ್ಯದ ಕೆಲಸವನ್ನು ಪೂರ್ಣಗೊಳಿಸಿದ. ಈ ಪ್ರಸಂಗದಿಂದ ತಿಳಿಯುವ ನೀತಿಯೆಂದರೆ ಒಪ್ಪಿಕೊಂಡ ಕೆಲಸವನ್ನು ಪೂರ್ಣಗೊಳಿಸುವ ಸಂದರ್ಭದಲ್ಲಿ ಎದುರಾಗುವ ಸಮಸ್ಯೆಗಳನ್ನು ಎದುರಿಸಿ ಸಮರ್ಪಣಾ ಭಾವದಿಂದ ಎಂತದೇ ಕೆಲಸವನ್ನಾದರೂ ಸಾಧಿಸಬಹುದು ಎಂಬುದು ತಿಳಿಯುತ್ತದೆ.

ಹೀಗೆ ಗಣೇಶ 'ವಿದ್ಯೆ' ಯ ಅಧಿದೇವನಾಗಿ ವಿದ್ಯಾಗಣಪತಿ ಎನಿಸಿದ್ದಾನೆ. ಗಣೇಶನ ಬುದ್ಧಿ (ಬುದ್ಧಿವಂತಿಕೆ) ಸಿದ್ಧಿ (ಆಧ್ಯಾತ್ಮಿಕ ಶಕ್ತಿ) ಮತ್ತು ರಿದ್ಧಿ (ಸಮೃದ್ಧತೆ)ಯ ಪ್ರತಿರೂಪನಾಗಿದ್ದಾನೆ. ಶಿಕ್ಷಣ ದ್ಯೋತಕವೇ 'ಗಣೇಶ' ಶಿಕ್ಷಣದಿಂದ ಗಣೇಶನಂತಹ ವ್ಯಕ್ತಿತ್ವ ಸಂಪಾದಿಸಬೇಕು. ವಿದ್ಯೆಯಿಂದಲೇ ಸಮಾಜದಲ್ಲಿ ಗೌರವ, ಅಂತಹ ಗೌರವ ಆದರಗಳು ಗಣೇಶನ ಕೃಪೆಯಿಂದ ಸರ್ವರಿಗೂ ಲಭಿಸಲಿ. ●

# ನಿವೃತ್ತ ಶಿಕ್ಷಕರ ಕಾರ್ಯಶ್ಲಾಘನೆ ಹಾಗೂ ಶುಭಕೋರಿಕೆ

**ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಹಿರಿಯ ಕಾರ್ಯಕರ್ತರನ್ನು ಶಿಕ್ಷಕ ವೃತ್ತಿಯಿಂದ ನಿವೃತ್ತರಾದಾಗ ಅವರು ಸಂಘ ಕಾರ್ಯ ಮತ್ತು ವೃತ್ತಿ ಜೀವನದ ಕೆಲವು ಘಟನೆಗಳನ್ನು ಸ್ಮರಿಸಿ ಗೌರವಿಸುತ್ತದೆ ಹಾಗೂ ಮುಂಬರುವ ಕಾರ್ಯಕರ್ತರಿಗೆ ಪ್ರೇರಣೆ ನೀಡುತ್ತದೆ. ಅದರಂತೆ ಈ ಸಂಚಿಕೆಯಲ್ಲಿ, ಶ್ರೀ ಗುಂಡಾಚಾರ್, ಶ್ರೀ ಸುರೇಂದ್ರ, ಶ್ರೀ ಮಲ್ಲಿಕಾರ್ಜುನ ಕೂಡಗಿ ಇವರುಗಳ ಕಾರ್ಯ ಕುರಿತಾಗಿ ಶ್ಲಾಘಿಸುತ್ತದೆ.**

■ ಗಂಗಾಧರಾಚಾರಿ, ರಾಜ್ಯ ಉಪಾಧ್ಯಕ್ಷರು
ಗಂಗಪ್ಪ, ಬೆಂಗಳೂರು ವಿಭಾಗ ಪ್ರಮುಖ್

## ಶ್ರೀ ಗುಂಡಾಚಾರ್



ಶ್ರೀ ಗುಂಡಾಚಾರ್‌ರವರು ಶ್ರೀ ಬಂಡ್ಯಾಚಾರ ಮತ್ತು ಶ್ರೀಮತಿ ಶಾರದಮ್ಮ ಇವರ ಸುಪುತ್ರರಾಗಿ 01–07–1964 ರಲ್ಲಿ ಬಳ್ಳಾರಿ ಜಿಲ್ಲೆ ಹೊಸಪೇಟೆ ತಾಲೂಕಿನ ಕಂಪ್ಲಿಯಲ್ಲಿ ಜನಿಸಿದರು. 1979ರಲ್ಲಿ 9ನೇ ತರಗತಿ ಇರುವಾಗಲೇ ಆರ್‌ಎಸ್‌ಎಸ್ ಶಾಖಾ ಮುಖ್ಯ ಶಿಕ್ಷಕರಿಂದ ಆರಂಭವಾಗಿ 1981ರಲ್ಲಿ ಪ್ರಥಮ ಮತ್ತು 1982ರಲ್ಲಿ ದ್ವಿತೀಯ ಸಂಘ ಶಿಕ್ಷಾ ವರ್ಗ ಮುಗಿಸಿ ಬೌದ್ಧಿಕ, ಶಾರೀರಿಕ ವಿಭಾಗಗಳಲ್ಲಿ ನಗರ, ತಾಲ್ಲೂಕು, ಜಿಲ್ಲಾ ಜವಾಬ್ದಾರಿಗಳನ್ನು ನಿರ್ವಹಿಸಿದ್ದಾರೆ. ಇವರಿಗೆ ಅಂದಿನ ಜಿಲ್ಲಾ , ವಿಭಾಗ ಹಾಗೂ ಸಹ ವಿಭಾಗ ಪ್ರಚಾರಕರಾಗಿದ್ದ ಪ್ರಮೋದ್ ಮುತಾಲಿಕ್, ಬಾಬುರಾವ್ ದೇಸಾಯಿ, ದಿನೇಶ್ ಕಾಮತ್ ಇವರುಗಳಿಂದ ಸಂಘ ಕಾರ್ಯದ ಪ್ರೇರಣೆಯಾಯಿತು. ನಂತರ ಸಂಘದ ಸೂಚನೆಯಂತೆ ವಿದ್ಯಾರ್ಥಿ ಪರಿಷತ್ (ಎಬಿವಿಪಿ) ಕಾರ್ಯಕರ್ತರಾಗಿ ಮುಂದುವರೆದು ಎಬಿವಿಪಿಯ ನಗರ, ಜಿಲ್ಲಾ, ವಿಭಾಗ, ರಾಜ್ಯ ಕಾರ್ಯಕಾರಣಿ ಸದಸ್ಯರಾಗಿ ಹಾಗೂ ವಿಶ್ವ ಹಿಂದೂ ಪರಿಷತ್ತಿನ ಜವಾಬ್ದಾರಿ ಸೇರಿದಂತೆ ಅನೇಕ ಜವಾಬ್ದಾರಿಗಳನ್ನು ನಿರ್ವಹಿಸಿದ್ದಾರೆ. ಆ ದಿನಗಳಲ್ಲಿ ಹಿರಿಯರುಗಳಾದ ಪ್ರೊಫೆಸರ್ ಕೃಷ್ಣ ಭಟ್, ಮಾಧವ ಭಟ್, ಕೃ ನರಹರಿಯವರು, ಅನಂತ ಕುಮಾರ್, ವಿಶ್ವೇಶ್ವರ ಹೆಗಡೆ ಕಾಗೇರಿ, ಬಾಲಕೃಷ್ಣ ಭಟ್ ಆರ್‌ಎಸ್‌ಎಸ್ ನ ಇಂದಿನ ಸರಕಾರ್ಯವಾಹರಾದ ದತ್ತಾತ್ರೇಯ ಹೊಸಬಾಳೆ, ಇವರುಗಳ ಮಾರ್ಗದರ್ಶನ ಮತ್ತು ಒಡನಾಟ ಸಿಕ್ಕಿದ್ದು ನನ್ನ ಪೂರ್ವ ಜನ್ಮದ ಪುಣ್ಯವೇ ಸರಿ ಎಂದು ಸ್ಮರಿಸುತ್ತಾರೆ.

ಶಿಕ್ಷಕನಲ್ಲದಿದ್ದರೂ ಕೃ ನರಹರಿಜಿಯವರ ಮಾರ್ಗದರ್ಶನದಂತೆ ಸಂಘದ ಕಾರ್ಯಕರ್ತರಾಗಿ 1989ರಲ್ಲಿ ಮೊಟ್ಟ ಮೊದಲಿಗೆ ಕಂಪ್ಲಿ ಫಿರ್ಕಾ ಹಂತದಲ್ಲಿ ಶಿಕ್ಷಕ ಸಂಘದ ಅಭ್ಯಾಸ ವರ್ಗ ಆಯೋಜನೆ ಮಾಡಿದ್ದು ಇತಿಹಾಸವೇ ಸರಿ. 1990ರಲ್ಲಿ ಸರ್ಕಾರದ ಅಬಕಾರಿ ಇಲಾಖೆಯಲ್ಲಿ ನೇಮಕಗೊಂಡು "ಆ ಇಲಾಖೆ ನನಗೆ ಒಗ್ಗುವುದಿಲ್ಲ" ವೆಂದು ಸರ್ಕಾರದ ಆ ಹುದ್ದೆಯನ್ನೇ ತ್ಯಜಿಸಿ ನಂತರ 1994ರಲ್ಲಿ ದೈಹಿಕ ಶಿಕ್ಷಕರಾಗಿ ಆಯ್ಕೆಗೊಂಡು ಶಿಕ್ಷಕ ಸಂಘದ ಕಾರ್ಯಕರ್ತರಾಗಿ 1995ರಲ್ಲಿ ಮೊದಲಿಗೆ ರಾಯಚೂರು ಜಿಲ್ಲೆ, 2009ರಲ್ಲಿ ಬಳ್ಳಾರಿ ಜಿಲ್ಲಾ ಅಧ್ಯಕ್ಷರಾಗಿ ನಂತರ ವಿಭಾಗ & ರಾಜ್ಯ ಪದಾಧಿಕಾರಿಯಾಗಿ ವಿವಿಧ ಜವಾಬ್ದಾರಿಗಳನ್ನು ನಿರ್ವಹಿಸಿದ್ದಾರೆ. ಶಿಕ್ಷಕ ಸಂಘದಲ್ಲಿ ಹಿರಿಯರುಗಳಾದ ಕೃ ನರಹರಿಜಿ, ಬಸವರಾಜ್ ಪಾಟೀಲ್ ಸೇಡಂ, ಗಲಗಲಿ, ಜಿ.ಎಸ್ ಕೃಷ್ಣಮೂರ್ತಿ, ಎಚ್. ನಾಗಭೂಷಣರಾವ್, ಆರ್.ಸೀತಾಲಕ್ಷ್ಮಿ ಇವರುಗಳ ಮಾರ್ಗದರ್ಶನದಲ್ಲಿ ಶಿಕ್ಷಕ ಸಂಘದ ಹಲವಾರು ಕಾರ್ಯಕ್ರಮಗಳನ್ನು ಆಯೋಜಿಸಿ ಭಾಗವಹಿಸಿದ್ದು ಸಾರ್ಥಕ ಜೀವನ ಎನಿಸುತ್ತದೆ ಎನ್ನುತ್ತಾರೆ. ಈ ಕಾರ್ಯದಲ್ಲಿ ಡಾಕ್ಟರ್ ಜಿ ಮತ್ತು ಗುರೂಜಿ ಎಂದು ಸಂಬೋಧಿಸುತ್ತಿದ್ದ ಮತ್ತು ಆತ್ಮೀಯ ಒಡನಾಡಿಗಳಾಗಿದ್ದ ಶ್ರೀಧರಮೂರ್ತಿ ಹಾಗೂ ಆರ್.ಕೊಟ್ರಪ್ಪ ಇವರುಗಳ ಸಹಕಾರ ಮರೆಯುವಂತಿಲ್ಲ. ಗಣೇಶ ಕಾರ್ಣಿಕ್, ಶಿವಾನಂದ ಸಿಂಧನಕೇರಾ, ಇವರುಗಳ ಮಾರ್ಗದರ್ಶನ ಸ್ಮರಣೀಯ ಎನ್ನುವರು. "ಪ್ರತಿ ಬೈಠಕ್‌ಗಳಲ್ಲಿ ನರಹರಿಜಿಯವರ ದರ್ಶನವೇ ನನಗೆ ಸಂಘದ ಮುಂದಿನ ಕಾರ್ಯಸ್ಫೂರ್ತಿ ಹಾಗೂ ಅವರ ತ್ಯಾಗ ಜೀವನ, ವ್ಯಕ್ತಿತ್ವ ಸೇವಾ ಕಾರ್ಯ ಇವುಗಳು ಎಲ್ಲ ಕಾರ್ಯಕರ್ತರಿಗೆ ಮಾದರಿಯಾಗಿವೆ"

ದೈಹಿಕ ಶಿಕ್ಷಕರಾಗಿ ಶಾಲೆಯಲ್ಲಿ ಸುದೀರ್ಘ ಸೇವೆ ಸಲ್ಲಿಸಿ, 30–06–2024ರಲ್ಲಿ ನಿವೃತ್ತರಾಗಿ ಇತರ ಶಿಕ್ಷಕರಿಗೆ ಮತ್ತು ವಿದ್ಯಾರ್ಥಿಗಳಿಗೆ ಹಾಗೂ ಸಮಾಜದಲ್ಲಿ ತಮ್ಮದೇ ಆದ ಕಾರ್ಯವೈಖರಿ ಮತ್ತು ಮಾದರಿ ವ್ಯಕ್ತಿತ್ವದ ಛಾಪು ಮೂಡಿಸಿ "ಗುಂಡಣ್ಣ" ಎಂದೇ ಹೆಸರಾಗಿದ್ದು ಇವರು ಅಪಾರ ಕಾರ್ಯಕರ್ತರಿಗೆ  ಮತ್ತು ಶಿಷ್ಯ ಬಳಗಕ್ಕೆ ಪ್ರೀತಿ ಪಾತ್ರರಾಗಿದ್ದಾರೆ ಎಂಬುದೇ ಹೆಮ್ಮೆಯ ಸಂಗತಿ.

ಸಂಘ ಕಾರ್ಯದಲ್ಲಿ ಬಳ್ಳಾರಿಯ ಶ್ರೀಮತಿ ಕುಮುದಿನಿ, ಸುಮಾ, ಕವಿತಾ, ನರಸನಗೌಡ ಕೊಟ್ರೇಶ್, ಕುಮಾರಸ್ವಾಮಿ, ಹೊಸಪೇಟೆಯ ಚನ್ನಬಸಪ್ಪ, ಶೇಖರ ಹೊರಪೇಟೆ , ಬಿಇಒ ಇವರುಗಳು ಹಾಗೂ ಗಂಗಾಧರಾಚಾರಿ, ಮಲ್ಲಿಕಾರ್ಜುನ ಇಂತಹ ಅನೇಕ ಕಾರ್ಯಕರ್ತರನ್ನು ಶಿಕ್ಷಕ ಸಂಘಕ್ಕೆ ಪರಿಚಯಿಸಿದ್ದಾರೆ. ನಿವೃತ್ತರಾದರೂ ಭಾರತಾಂಬೆಯ ಸೇವೆಯನ್ನು ಸಲ್ಲಿಸಲು ಉತ್ಸುಕರಾಗಿದ್ದಾರೆ. ಇವರ ಕಾರ್ಯ ಮುಂದಿನ ಕಾರ್ಯಕರ್ತರಿಗೆ ಮಾದರಿಯಾಗಿದೆ.

ಶಿಕ್ಷಕ ಸಂಘ ಇವರ ಶ್ಲಾಘನೀಯ ಕಾರ್ಯವನ್ನು ಅಭಿನಂದಿಸಿ ಮುಂಬರುವ ಕಾರ್ಯಕರ್ತರಿಗೆ ಇವರ ಮಾರ್ಗದರ್ಶನ ನೀಡಲೆಂದು ಅಪೇಕ್ಷಿಸುತ್ತಾ ಭಗವಂತನ ಕೃಪೆಯಿಂದ ನಿವೃತ್ತಿಯ ಜೀವನ ಆರೋಗ್ಯ ಮತ್ತು ನೆಮ್ಮದಿಯಿಂದಿರಲೆಂದು ಶುಭ ಕೋರುತ್ತದೆ.

## ಶ್ರೀ ಸುರೇಂದ್ರ

ಶ್ರೀ ಸುರೇಂದ್ರರವರು ಆಂಜನಪ್ಪ ಮತ್ತು  ಗಂಗಮ್ಮ ಇವರ ಸುಪುತ್ರರಾಗಿ 20.7.1964 ರಲ್ಲಿ ಕೋಲಾರ ಜಿಲ್ಲೆ, ಮಾಲೂರು ತಾಲೂಕು ಬಿಟ್ನಹಳ್ಳಿ ಎಂಬ ಗ್ರಾಮದಲ್ಲಿ ಸಾಮಾನ್ಯ ಕುಟುಂಬದಲ್ಲಿ ಜನಿಸಿ 1979ರಲ್ಲಿ ಸಂಘ ಶಿಕ್ಷಣ ಮುಗಿಸಿ SSLC ಯ ನಂತರ  1980 ರಲ್ಲಿ ವಿದ್ಯಾಭ್ಯಾಸ ಬಿಟ್ಟು ಉದ್ಯೋಗ ಅರಸಿ ಬೆಂಗಳೂರಿಗೆ ಬಂದರು,ಆ ದಿನಗಳಲ್ಲಿ ಆರ್.ಎಸ್.ಎಸ್ ಪ್ರಚಾರಕರಾಗಿದ್ದ ಇವರ ಸಹೋದರರಾದ ಮುಕುಂದರಾಜು ಇವರು

ಪುಟ 6 ಕ್ಕೆ ➢

➢ ಪುಟ 5 ರಿಂದ.....



ಉದ್ಯೋಗದ ಉದ್ದೇಶ ಬದಲಿಸಿ ಶಿಕ್ಷಣ ಮುಂದುವರೆಸುವಂತೆ ಸೂಚಿಸಿ, ಸಂಘ ಕಾರ್ಯಕ್ಕೆ ಜೋಡಿಸಿದರು, ನಂತರ ಸಂಘದ ಕೇಶವ ಕೃಪ ಕಾರ್ಯಾಲಯದಲ್ಲಿ 1981–85 ವರೆಗೆ ವಾಸ್ತವ್ಯವಾಗಿದ್ದು ವಿಸ್ತಾರಕರಾಗಿ ಶಾಖೆಗಳ ಜವಾಬ್ದಾರಿಯ ಕೆಲಸ ಕಾರ್ಯಗಳನ್ನು ನಿರ್ವಹಿಸುತ್ತಾ ಶಾರೀರಿಕ ವಿಭಾಗದಲ್ಲಿ ಆಸಕ್ತಿ ವಹಿಸಿ ಕಬಡ್ಡಿಯಲ್ಲಿ ರಾಜ್ಯಮಟ್ಟದ ಕ್ರೀಡಾಪಟುವಾಗಿ ಬೆಳೆದರು, ಮುಂದುವರೆದು ಸಿ.ಪಿ.ಇ.ಡಿ. ಶಿಕ್ಷಣ ಪಡೆಯಲು ಆರ್.ಎಸ್.ಎಸ್‌ನ ಹಿರಿಯರುಗಳಾದ ಮಾನ್ಯ ಮೈ.ಚ.ಜಯದೇವ ರವರು ಹಾಗೂ ಮಾನ್ಯ ಅಜಿತ್ ಕುಮಾರ್ ರವರು ಕೇಶವ ಕೃಪದಿಂದ ಇವರನ್ನು ವಿದ್ಯಾಭ್ಯಾಸಕ್ಕೆ ಸಹಕಾರ ನೀಡಿ ಮಲ್ಲಾಡಿ ಹಳ್ಳಿಗೆ ಕಳಿಸಲಾಯಿತು,

ಅಲ್ಲಿನ ಆಶ್ರಮದ ಮುಖ್ಯಸ್ಥರಾದ ಶ್ರೀ ರಾಘವೇಂದ್ರ ಸ್ವಾಮಿಯವರ ಅಚ್ಚುಮೆಚ್ಚಿನ ಶಿಷ್ಯರಾದರು ಕಾರಣ ಸುರೇಂದ್ರ ರವರ ಸೇವಾ ಮನೋಭಾವದ ಕೆಲಸ ಕಾರ್ಯಗಳು ಮೆಚ್ಚುಗೆಯಾದವು, ಶ್ರೀ ಗಳ ಮಾರ್ಗದರ್ಶನದಲ್ಲಿ ಶಿಕ್ಷಣ ಪಡೆದು ಕ್ರೀಡಾ & ಯೋಗ ಪಟುವಾದರು.

1987 ರಲ್ಲಿ ವಿಕಾಸ ಪ್ರೌಢಶಾಲೆ ಬೆಂಗಳೂರು ಇಲ್ಲಿ ಶಿಕ್ಷಕರಾಗಿ ನೇಮಕಗೊಂಡು 33 ವರ್ಷಗಳ ಕಾಲ ಸೇವೆ ಸಲ್ಲಿಸಿದರು, ಈ ಶಾಲೆಗೆ ಹೆಚ್ಚು ಬಡಮಕ್ಕಳು ಸೇರುತ್ತಿದ್ದು ಅಂತಹ ಹಲವು ವಿದ್ಯಾರ್ಥಿಗಳಿಗೆ ಪ್ರತಿ ವರ್ಷ ದಾನಿಗಳ ಮುಖಾಂತರ ಶಾಲಾ ಶುಲ್ಕ, ಸಮವಸ್ತ್ರ, ಪುಸ್ತಕಗಳು ಕೊಡ ಮಾಡಿಸುತ್ತಿದ್ದರು, ಈ ಶಾಲಾ ವಿದ್ಯಾರ್ಥಿಗಳು ಸತತವಾಗಿ ಹದಿನೈದು ವರ್ಷ ತಾಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ಕಬ್ಬಡಿಯಲ್ಲಿ ಪ್ರಥಮ ಸ್ಥಾನ ಹಾಗೂ ರಾಜ್ಯಮಟ್ಟದಲ್ಲಿ ಎರಡು ಬಾರಿ ಭಾಗವಹಿಸುವಂತೆ ತರಬೇತಿ ನೀಡಿದ ಕೀರ್ತಿ ಸುರೇಂದ್ರ ಅವರದ್ದಾಗಿದೆ ಹಾಗೂ ಐದು ಬಾರಿ ವಿಕಾಸ ಶಾಲೆಯಲ್ಲಿ ಇಲಾಖೆಯ ವತಿಯಿಂದ ನಡೆಸಲಾದ ತಾಲೂಕು ಮತ್ತು ಜಿಲ್ಲಾ ಮಟ್ಟದ ಕಬಡ್ಡಿ ಪಂದ್ಯಾವಳಿ ಉಸ್ತುವಾರಿಯ ವಹಿಸಿಕೊಂಡು ಯಶಸ್ವಿಯಾಗಿ ನಡೆಸಿಕೊಡಲಾಯಿತು, ಹೆಚ್ಚುವರಿ ಶಿಕ್ಷಕರಾಗಿ ಸರ್ಕಾರಿ ಶಾಲೆಗೆ ಒಂದೇ ವರ್ಷ ನಿಯೋಜನೆ ಗೊಂಡರೂ ಅಲ್ಲಿ ಅಗತ್ಯವಿದ್ದ ಕುಡಿಯುವ ನೀರು ಶೌಚಾಲಯ ವ್ಯವಸ್ಥೆ, ಸುಣ್ಣ ಬಣ್ಣ ಎಲ್ಲವನ್ನು ದಾನಿಗಳ ಮುಖಾಂತರವಾಗಿ ಕೊಡ ಮಾಡಿಸಿ ಶಾಲಾ ಅಭಿವೃದ್ಧಿಗೊಳಿಸಿದರು. ಅಂತಿಮವಾಗಿ ಸಿದ್ದಾರ್ಥ ಪ್ರೌಢಶಾಲೆಗೆ ನಿಯೋಜನೆಗೊಂಡು ಎರಡು ವರ್ಷಗಳಕಾಲ ಸೇವೆಸಲ್ಲಿಸಿದರೂ ಆ ಶಾಲೆಯ ಅಭಿವೃದ್ಧಿ & ಮೂಲಭೂತ ಸೌಕರ್ಯಗಳಿಗಾಗಿ ಸುಮಾರು 25 ಲಕ್ಷ ರೂಗಳ ದೇಣಿಗೆಯನ್ನು ದಾನಿಗಳಿಂದ ಆರ್ಥಿಕ ನೆರವು ನೀಡುವಂತೆ ಮಾಡಿ ಶಾಲಾ ಅಭಿವೃದ್ಧಿಗೊಳಿಸಲು ಸಹಕರಿಸಿದರು.

ವಿದ್ಯಾಭಾರತಿ ಕರ್ನಾಟಕ ಸಂಘಟನೆಯಲ್ಲಿ ಜಿಲ್ಲಾ ಶಾರೀರಿಕ ಪ್ರಮುಖರಾಗಿ ಜವಾಬ್ದಾರಿ ನಿರ್ವಹಿಸಿ, ರಾಜ್ಯ ಮತ್ತು ಕ್ಷೇತ್ರೀಯ ಮಟ್ಟದಲ್ಲಿ ಕಬಡ್ಡಿ ತೀರ್ಪುಗಾರರಾಗಿ, ಎರಡು ವರ್ಷಗಳ ಕಾಲ ರಾಜ್ಯಮಟ್ಟದ ಕ್ರೀಡಾಕೂಟವನ್ನೂ ಸಹ ಸಂಘಟನೆ ಮಾಡಿರುವರು. ಸಾರ್ವಜನಿಕ ಶಿಕ್ಷಣ ಇಲಾಖೆ ಹಮ್ಮಿಕೊಳ್ಳುತ್ತಿದ್ದ ಕ್ರೀಡಾಕೂಟಗಳಿಗೆ ಪ್ರತಿ ವರ್ಷ ಊಟದ ವ್ಯವಸ್ಥೆಯನ್ನು ದಾನಗಳಿಂದ ಕೊಡ ಮಾಡಿಸುತ್ತಿದ್ದರು. ಶಿಕ್ಷಣ ಇಲಾಖೆಯಿಂದ ಜಿಲ್ಲಾ ಉತ್ತಮ ಶಿಕ್ಷಕನೆಂದು ಪ್ರಶಸ್ತಿಯನ್ನು ಕೊಡ ಮಾಡಲಾಗಿದೆ. ದೈಹಿಕ ಶಿಕ್ಷಕ ಸಂಘದ ರಾಜ್ಯ ಉಪಾಧ್ಯಕ್ಷರಾಗಿ ಜವಾಬ್ದಾರಿ ನಿರ್ವಹಿಸಿರುತ್ತಾರೆ.

1988 ರಲ್ಲಿ ಮಾಧ್ಯಮಿಕ ಶಿಕ್ಷಕ ಸಂಘದ ಬೆಂಗಳೂರು ಉತ್ತರ ಜಿಲ್ಲೆ, ದಕ್ಷಿಣ ಜಿಲ್ಲೆ ಜವಾಬ್ದಾರಿ ವಹಿಸಿಕೊಂಡು ನಂತರ ವಿಭಾಗ ಪ್ರಮುಖ, ರಾಜ್ಯ ಕೋಶಾಧ್ಯಕ್ಷ ವಿವಿಧ ಜವಾಬ್ದಾರಿಗಳನ್ನು ನಿರ್ವಹಿಸುತ್ತಾ ಸತತವಾಗಿ ಶಿಕ್ಷಕ ಸಂಘದಿಂದ ಬೆಂಗಳೂರು ದಕ್ಷಿಣ ಜಿಲ್ಲೆಯ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದ ಆಯೋಜನೆ, 1980ರಲ್ಲಿ ಖಖಐಅ ಪರೀಕ್ಷಾ ಲೋಪದೋಷಗಳ ಕುರಿತಾಗಿ ಕಾರ್ಯಗಾರ, ಶಿಕ್ಷಕನ ಜೀವನ ಮೌಲ್ಯಗಳ ಕುರಿತಾಗಿ ಕಾರ್ಯಗಾರ, ಹೀಗೆ ಹತ್ತು ಹಲವು ಕಾರ್ಯಕ್ರಮಗಳನ್ನು ಆಯೋಜಿಸಿರುವುದು ಎಬಿಆರ್‌ಎಸ್‌ಎಂ ಅಧಿವೇಶನಕ್ಕೆ ಒಬ್ಬ ಶಿಕ್ಷಕನಾಗಿ ದಾನಿಗಳಿಂದ ಹೆಚ್ಚಿನ ದೇಣಿಗೆ ಸಂಗ್ರಹಿಸಿದ್ದು, ಇವೆಲ್ಲವೂ ಶಿಕ್ಷಕ ಸಂಘದ ಹೆಮ್ಮೆಯ ಸಂಗತಿಯಾಗಿದೆ .ಶಿಕ್ಷಕ ಸಂಘದಲ್ಲಿ ಹಿರಿಯರಾದ ಕೃ. ನರಹರಿಜಿ ರವರಿಗೆ ಅಚ್ಚುಮೆಚ್ಚಿನ ಮಾನಸ ಪುತ್ರರಾಗಿ ಅವರ ಮಾರ್ಗದರ್ಶನಂತೆ ಸಂಘ ಕಾರ್ಯದಲ್ಲಿ ನಿರಂತರವಾಗಿ ಹೆಜ್ಜೆ ಹಾಕಿರುವರು,ಒಂದು ಉಲ್ಲೇಖನೀಯ ಘಟನೆ ಎಂದರೆ ಶಿಕ್ಷಕ ಸಂಘದ ರಾಷ್ಟ್ರೀಯ ಕಾರ್ಯಕ್ರಮಕ್ಕೆ ನರಹರಿಜಿಯ ರೊಂದಿಗೆ ದೆಹಲಿಗೆ ಹೋದಾಗ ರೈಲು ತುಂಬಾ ವಿಳಂಬವಾದಾಗ ಇಬ್ಬರೂ ರಸ್ತೆ ಬದಿಯಲ್ಲೇ ಉಪಹಾರ ಸೇವಿಸಿ ರೈಲ್ವೆ ನಿಲ್ದಾಣದ ನೆಲದಲ್ಲೇ ಮಲಗಿದ್ದು ಮರೆಯುವಂತಿಲ್ಲ, ಸಂಘ ಕಾರ್ಯದಲ್ಲಿ ಅಂತಹ ಮೇಲ್ಪಂಕ್ತಿ ವ್ಯಕ್ತಿತ್ವದ ಹಿರಿಯರು ನನ್ನೊಟ್ಟಿಗೆ ನೆಲದಲ್ಲಿ ಮಲಗಿದಾಗ ಮನದಲ್ಲಿ ಮೂಡಿದ್ದು ನಾನೊಬ್ಬ ಶಿಕ್ಷಕನಲ್ಲ ಕೇವಲ ಸ್ವಯಂಸೇವಕ ಎಂಬ ಭಾವನೆ,ಅವರು ನನ್ನ ಜೀವನ ಮಾರ್ಗದರ್ಶಕರು ಅದರಂತೆ ಶಿಕ್ಷಕ ಸಂಘ ಕಾರ್ಯದಲ್ಲಿ ಹಿರಿಯರಾದ ಹೆಚ್. ನಾಗಭೂಷಣ ರಾವ್, ಸೀತಾಲಕ್ಷ್ಮಿ , ಬಾಲಕೃಷ್ಣ ಭಟ್, ಕೃಷ್ಣಮೂರ್ತಿಜಿ ಇವರುಗಳ ಮಾರ್ಗದರ್ಶನ ಹಾಗೂ ಹಿಂದಿನ ಮತ್ತು ಪ್ರಸ್ತುತ ಇರುವ ಪದಾಧಿಕಾರಿಗಳ ಸಹಕಾರ ಮರೆಯುವಂತಿಲ್ಲ ಎನ್ನುತ್ತಾರೆ.

1979 ರಲ್ಲಿ ಸ್ವಗ್ರಾಮದಲ್ಲಿನ ಶಾಖೆಯ ಮುಖಾಂತರ ಆರ್‌ಎಸ್‌ಎಸ್ ಸಂಪರ್ಕ ಬೆಳೆದು ನಂತರ ಸಂಘದ ತೃತೀಯ ವರ್ಷದ ಶಿಕ್ಷಣ ನಾಗಪುರದಲ್ಲಿ ಮುಗಿಸಿ ಬೆಂಗಳೂರು ಕೇಂದ್ರವಾಗಿರಿಸಿಕೊಂಡು ಸಂಘದ ವಿವಿಧ ಜವಾಬ್ದಾರಿಗಳನ್ನು ನಿರ್ವಹಿಸಿ ಪರಿವಾರ ಸಂಘಟನೆಗಳಿಗೂ ಸಹಕಾರ ನೀಡುತ್ತಾ ಸಂಘ ಕಾರ್ಯ ಬೆಳೆಯುವಲ್ಲಿ ತಮ್ಮದೇ ಆದ ಪಾತ್ರ ನಿರ್ವಹಿಸಿದ್ದಾರೆ, ಆರ್‌ಎಸ್‌ಎಸ್ ನಲ್ಲಿ ಹಿರಿಯರುಗಳಾದ, ದತ್ತೋಪಂಥ ಠೇಂಗಡಿ, ಜಗನ್ನಾಥ್ ರಾವ್ ಜೋಶಿ, ಹೋ.ವೆ .ಶೇಷಾದ್ರಿ, ನ. ಕೃಷ್ಣಪ್ಪ ಮುಂತಾದವರಿಗೆ ಅನುಚರಣೆ ವಿಭಾಗದಲ್ಲಿದ್ದು ಅವರು ಸೇವೆ ಮಾಡಿದ್ದು ನನ್ನ ಅದೃಷ್ಟವೇ ಸರಿ ಎನ್ನುತ್ತಾರೆ, ಹಾಗೂ ಪ್ರಸ್ತುತ ಇರುವ ಸಂಘದ ಎಲ್ಲ ಹಿರಿಯ ಅಧಿಕಾರಿಗಳ ಪ್ರೀತಿಯ ಪಾತ್ರರಾಗಿ ಅವರ ಮಾರ್ಗದರ್ಶನದಂತೆ ಸಂಘ ಕಾರ್ಯ ಮಾಡುತ್ತಿರುವುದು ಸಾರ್ಥಕ ಎನಿಸಿದೆ ಎನ್ನುವರು,

“ನೀವು ಒಬ್ಬ ವ್ಯಕ್ತಿ ಶಕ್ತಿಯಾಗಿ ಬೆಳೆಯಲು ಹೇಗೆ ಸಾಧ್ಯವಾಯಿತು ಎಂಬ ಪ್ರಶ್ನೆಗೆ ಸುರೇಂದ್ರ ರವರ ಉತ್ತರ ಎಲ್ಲವನ್ನು ಕಲಿಸಿದ್ದು ಆರ್‌ಎಸ್‌ಎಸ್ ಏನನ್ನೂ ಸ್ವಂತಕ್ಕೆ ಅಪೇಕ್ಷಿಸದೆ ಸಮಾಜದಿಂದ ಸಮಾಜಕ್ಕೆ ಅರ್ಪಿಸುವ ಪ್ರಯತ್ನ ಮಾತ್ರ ನನ್ನದು ಎನ್ನುವರು. ಸುರೇಂದ್ರ ರವರಿಗೆ ಏನೆಲ್ಲಾ ಅವಕಾಶಗಳಿದ್ದರೂ 40ವರ್ಷ ಸ್ವಯಂಸೇವಕರಾಗಿ ಎಂದೂ ಸ್ವಂತಕ್ಕೆ ಏನನ್ನೂ ಬಯಸದೆ ನೈತಿಕ ಮೌಲ್ಯಗಳಿಗೆ ಧಕ್ಕೆ ಬಾರದಂತೆ ಸಂಘ ಕಾರ್ಯ ಮತ್ತು ಸಮಾಜ ಸೇವೆ ಮಾಡುತ್ತಾ ನಡೆದು ಬಂದಿರುವುದು ಇತರೆ ಕಾರ್ಯಕರ್ತರಿಗೆ ಮಾದರಿಯಾಗಿದ್ದಾರೆ.

ಪುಟ 9 ಕ್ಕೆ ➢

# ಪ್ರತಿಭಾ ಪುರಸ್ಕಾರ–ಬೆಂಗಳೂರು ಉತ್ತರ ಜಿಲ್ಲೆ

■ ಗಂಗಾಧರ. ಎಂ.ವಿ,
ಅಧ್ಯಕ್ಷರು, ಕರ್ನಾಟಕ ರಾಜ್ಯ ಮಾಧ್ಯಮಿಕ
ಶಿಕ್ಷಕ ಸಂಘ, ಬೆಂಗಳೂರು ಉತ್ತರ ವಲಯ–3

28–07–2024ರ ಭಾನುವಾರ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ, ಬೆಂಗಳೂರು ಉತ್ತರ ಜಿಲ್ಲೆಯ ವತಿಯಿಂದ ಆಯೋಜನೆ ಮಾಡಲಾಗಿದ್ದ 2023–2024ನೇ ಶೈಕ್ಷಣಿಕ ಸಾಲಿನ ಬೆಂಗಳೂರು ಉತ್ತರ ಜಿಲ್ಲೆಯ ಸರ್ಕಾರಿ, ಅನುದಾನಿತ, ಬಿ.ಬಿ.ಎಂ.ಪಿ ಹಾಗೂ ಅನುದಾನ ರಹಿತ ಖಾಸಗಿ ಶಾಲೆಗಳಲ್ಲಿ ಹತ್ತನೇ ತರಗತಿ ಪರೀಕ್ಷೆಗಳಲ್ಲಿ ಶಾಲಾ ಪ್ರಥಮಿಗ ವಿದ್ಯಾರ್ಥಿಗಳು ಮತ್ತು ಶೇಕಡಾ 85ಕ್ಕಿಂತಲೂ ಹೆಚ್ಚು ಅಂಕ ಗಳಿಸಿದ ಶಿಕ್ಷಕರ ಮಕ್ಕಳಿಗೆ 36ನೇ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಬೆಂಗಳೂರು ಮಲ್ಲೇಶ್ವರಂನ ಪ್ರಸಿದ್ಧ ಶಿಕ್ಷಣ ಸಂಸ್ಥೆಯಾದ ಹಿಮಾಂಶು ಜ್ಯೋತಿ ಕಲಾಪೀಠದಲ್ಲಿ ಶಿಕ್ಷಕರು, ಪೋಷಕರು ಹಾಗೂ ಪ್ರತಿಭಾ ಪುರಸ್ಕಾರ ವಿದ್ಯಾರ್ಥಿಗಳೊಂದಿಗೆ ಯಶಸ್ವಿಯಾಗಿ ನೆರವೇರಿತು.

ಪ್ರತಿಭಾ ಪುರಸ್ಕಾರ ಕಾರ್ಯಕ್ರಮವು ಬೆಂಗಳೂರು ಉತ್ತರ ಜಿಲ್ಲೆಯ ಕಾರ್ಯದರ್ಶಿಗಳಾದ ಶ್ರೀ ಬಿ.ಆರ್ ಹರಿದಾಸ್‌ರವರ ಸುಶ್ರಾವ್ಯ ಪ್ರಾರ್ಥನೆಯೊಂದಿಗೆ ಪ್ರಾರಂಭವಾಯಿತು. ಬೆಂಗಳೂರು ಉತ್ತರ ಜಿಲ್ಲೆಯ ಅಧ್ಯಕ್ಷರಾದ ಶ್ರೀ ಮಲ್ಲಿಕಾರ್ಜುನ ಜಿ ಕೂಡಗಿರವರು ವೇದಿಕೆಯ ಮೇಲೆ ಉಪಸ್ಥಿತರಿದ್ದ ಎಲ್ಲಾ ಗಣ್ಯರನ್ನು ಸಭೆಗೆ ಪರಿಚಯಿಸಿ, ಕಾರ್ಯಕ್ರಮದಲ್ಲಿ ಹಾಜರಿದ್ದ ಎಲ್ಲಾ ಶಿಕ್ಷಕರನ್ನು ಪೋಷಕರನ್ನು ಹಾಗೂ ಪ್ರತಿಭಾ ಪುರಸ್ಕೃತ ವಿದ್ಯಾರ್ಥಿಗಳನ್ನು ಹಾರ್ದಿಕವಾಗಿ ಸ್ವಾಗತಿಸಿದರು. ನಂತರ ವೇದಿಕೆಯ ಮೇಲೆ ಉಪಸ್ಥಿತರಿದ್ದ ಎಲ್ಲಾ ಗಣ್ಯರು ದೀಪಪ್ರಜ್ವಲನವನ್ನು ಮಾಡಿ ಪ್ರತಿಭಾ ಪುರಸ್ಕಾರ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಬೆಂಗಳೂರು ಉತ್ತರ ಜಿಲ್ಲೆ ಹಾಗೂ ಗ್ರಾಮಾಂತರ ಜಿಲ್ಲೆಯ ವಿಭಾಗ ಪ್ರಮುಖರಾದ ಶ್ರೀ ಗಂಗಪ್ಪರವರು ತಮ್ಮ ಪ್ರಾಸ್ತಾವಿಕ ನುಡಿಯಲ್ಲಿ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ ಉದಯವಾದಾಗಿನಿಂದ ನಡೆಸುತ್ತಿರುವ ಕಾರ್ಯಕ್ರಮಗಳ ವಿವರಗಳನ್ನು ನೀಡಿದರು. ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ, ಬೆಂಗಳೂರು ಉತ್ತರ ವಲಯ–3ರ ಅಧ್ಯಕ್ಷರಾದ ಶ್ರೀ ಗಂಗಾಧರ.ಎಂ.ವಿರವರು ಪ್ರತಿಭಾ ಪುರಸ್ಕೃತ ವಿದ್ಯಾರ್ಥಿಗಳಿಗೆ ಪ್ರತಿಜ್ಞಾ ಬೋಧನೆ ಬೋಧಿಸಿದರು.

2023–24ನೇ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಉತ್ತಮ ಅಂಕ ಗಳಿಸಿದ ಪ್ರಥಮಿಗರಲ್ಲಿ ಪ್ರಥಮಿಗರಾದ ವಿದ್ಯಾರ್ಥಿಗಳನ್ನು ಬೆಂಗಳೂರು ಉತ್ತರ ಜಿಲ್ಲೆಯ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಉಪನಿರ್ದೇಶಕರಾದ ಶ್ರೀ ಹನುಮಂತರಾಯ.ಡಿರವರು ಸ್ಮರಣಿಕೆ, ಪ್ರಶಸ್ತಿ ಪತ್ರ, ಪುಸ್ತಕಗಳನ್ನು ನೀಡಿ ಅಭಿನಂದಿಸಿದರು. ನಂತರ ತಮ್ಮ ಭಾಷಣದಲ್ಲಿ ಪ್ರತಿಭಾ ಪುರಸ್ಕೃತ ವಿದ್ಯಾರ್ಥಿಗಳನ್ನು ಹಾಗೂ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘವನ್ನು ಅಭಿನಂದಿಸುತ್ತಾ ವಿದ್ಯಾರ್ಥಿಗಳು ಯಾವ ರೀತಿಯಲ್ಲಿ ವಿನಯ, ಸಂಸ್ಕೃತಿ, ದೇಶಾಭಿಮಾನವನ್ನು ಬೆಳೆಸಿಕೊಂಡು ತಮ್ಮ ಜ್ಞಾನವನ್ನು ಸದ್ಬಳಕೆ ಮಾಡಿಕೊಳ್ಳಬೇಕೆಂದು ತಿಳಿಸಿದರು. ಸ್ವಾಮಿ ವಿವೇಕಾನಂದರ ಜಠಣ್ಣಾಖ ಚಿಡಿಜ ಟಿಠಣ ಘಾಜಟಝ, ಣುಜಥಿ ಚಿಡಿಜ ಘಾಜಜ ಟಝ ಎಂಬ ವಾಣಿಯೊಂದಿಗೆ ತಮ್ಮ ಮಾತಿಗೆ ವಿರಾಮ ಹೇಳಿದರು.

ಖ್ಯಾತ ಆಯುರ್ವೇದ ತಜ್ಞರಾದ ಡಾ|| ನಿರಂಜನ್ ಎಲ್ಲೂರುರವರು ಶೇಕಡಾ 85ಕ್ಕಿಂತ ಹೆಚ್ಚು ಅಂಕಗಳಿಸಿದ ಶಿಕ್ಷಕರ ಮಕ್ಕಳಿಗೆ ಸ್ಮರಣಿಕೆ, ಪ್ರಶಸ್ತಿಪತ್ರ, ಪುಸ್ತಕಗಳನ್ನು ನೀಡಿ ಅಭಿನಂದಿಸಿ ಮಾತನಾಡುತ್ತಾ ನಮ್ಮ ದೇಶದ ಸಂಸ್ಕೃತಿ ನಮ್ಮ ಗುರುಹಿರಿಯರನ್ನು ಗೌರವಿಸುವ ಮೂಲಕ ಕಲಿಯಬೇಕು, ಗುರು ಬ್ರಹ್ಮ, ಗುರು ವಿಷ್ಣು ಗುರುವೇವೋ ಮಹೇಶ್ವರಃ ಅಂದರೆ ಗುರುಗಳು ಎಲ್ಲಾ ತ್ರಿಮೂರ್ತಿಗಳಿಗೆ ಸಮಾನವಾಗಿ ಎಲ್ಲಾ ವಿದ್ಯಾರ್ಥಿಗಳಲ್ಲಿ ಸಂಸ್ಕಾರ ಸಂಹಿತೆಯ ವಿಚಾರವನ್ನು ವಿದ್ಯಾರ್ಥಿ, ಪೋಷಕರಲ್ಲಿ ತಿಳಿಸಿದರು.

ಕಾರ್ಯಕ್ರಮದ ನಿರೂಪಣೆಯನ್ನು ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಬೆಂಗಳೂರು ಉತ್ತರ ವಲಯ–3ರ ಅಧ್ಯಕ್ಷರಾದ ಶ್ರೀ ಗಂಗಾಧರ.ಎಂ.ವಿರವರು ಉತ್ತಮವಾದ ರೀತಿಯಲ್ಲಿ ನಡೆಸಿಕೊಟ್ಟರು. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾದ ಹಿಮಾಂಶು ಜ್ಯೋತಿ ಕಲಾಪೀಠದ ಅಧ್ಯಕ್ಷರಾದ ಶ್ರೀ. ಬಿ.ವಿ.ಎ ರಾವ್‌ರವರು ಪ್ರತಿಭಾ ಪುರಸ್ಕೃತ ವಿದ್ಯಾರ್ಥಿಗಳನ್ನು ಸನ್ಮಾನಿಸಿ, ಅಭಿನಂದಿಸಿ ಮಾತನಾಡುತ್ತಾ ತಮ್ಮ ಜೀವನದ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಬೆಂಗಳೂರು ಉತ್ತರ ವಲಯ–3ರ ಅಧ್ಯಕ್ಷರಾದ ಶ್ರೀ ಗಂಗಾಧರ.ಎಂ.ವಿರವರು ಉತ್ತಮವಾದ ರೀತಿಯಲ್ಲಿ ನಡೆಸಿಕೊಟ್ಟರು. ಕಾರ್ಯಕ್ರಮದಲ್ಲಿ ಮುಖ್ಯಅತಿಥಿಗಳಾದ ಹಿಮಾಂಶು ಜ್ಯೋತಿ ಕಲಾಪೀಠದ ಅಧ್ಯಕ್ಷರಾದ ಶ್ರೀ.ಬಿ.ವಿ.ಎ ರಾವ್‌ರವರು ಪ್ರತಿಭಾ ಪುರಸ್ಕೃತ ವಿದ್ಯಾರ್ಥಿಗಳನ್ನು ಸನ್ಮಾನಿಸಿ, ಅಭಿನಂದಿಸಿ ಮಾತನಾಡುತ್ತಾ ತಮ್ಮ ಜೀವನದ ಅನುಭವಗಳನ್ನು ಎಲ್ಲರ ಜೊತೆ ಹಂಚಿಕೊಂಡರು. ಇಂದಿನ ವಿದ್ಯಾರ್ಥಿಗಳಲ್ಲಿ ಸುಪ್ತವಾಗಿ ಅಡಗಿರುವ ಜ್ಞಾನವನ್ನು ಯಾವರೀತಿಯಲ್ಲಿ ಸದ್ಬಳಕೆ ಮಾಡಿಕೊಂಡು ಸಮಾಜಕ್ಕೆ ಮಾದರಿಯಾಗಬೇಕೆಂದು ತಿಳಿಸಿದರು. ಶಿಕ್ಷಕಿ ಶ್ರೀಮತಿ ಇಫ್ರತುನ್ನಿಸಾರವರು ಇಂತಹ ಕಾರ್ಯಕ್ರಮಗಳು ವಿದ್ಯಾರ್ಥಿಗಳಿಗೆ ತುಂಬಾ ಒಳ್ಳೆಯ ಸ್ಫೂರ್ತಿಯನ್ನು ತುಂಬುತ್ತಿರುವ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘವನ್ನು ಅಭಿನಂದಿಸಿದರು.

ಕಾರ್ಯಕ್ರಮದಲ್ಲಿ ಹಾಜರಿದ್ದ ಪ್ರತಿಭಾಪುರಸ್ಕೃತ ವಿದ್ಯಾರ್ಥಿಗಳ ವಿವರಗಳನ್ನು ಬೆಂಗಳೂರು ಉತ್ತರ ಜಿಲ್ಲೆಯ ಪದಾಧಿಕಾರಿಗಳಾದ ಶ್ರೀ ಜನಾರ್ಧನ ಎಂ.ಎಸ್, ಶ್ರೀ ಮಂಜುನಾಥ್.ಟಿ.ಆರ್, ಶ್ರೀ ರಾಮಕೃಷ್ಣ ಜಿ.ಎಚ್, ಶ್ರೀಮತಿ ದಾಕ್ಷಾಯಿಣಿ, ಶ್ರೀ ಮೊಹಮ್ಮದ್ ಕಬೀರ್, ಶ್ರೀಮತಿ ಮಂಜುರೂಪರವರುಗಳು ನೀಡಿದರು. ಕಾರ್ಯಕ್ರಮದ ಯಶಸ್ಸಿಗೆ ಸಹಕರಿಸಿದ ದಾನಿಗಳ ವಿವರಗಳನ್ನು ಉತ್ತರ ವಲಯ–3 ಕಾರ್ಯದರ್ಶಿ ಶ್ರೀ ಕಿರಣ್ ಕುಮಾರ್‌ರವರು ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಬೆಂಗಳೂರು ಉತ್ತರ ಜಿಲ್ಲೆಯ ಗೌರವಾಧ್ಯಕ್ಷರು ಹಾಗೂ ಕಾರ್ಯಾಲಯ ಪ್ರಮುಖರು ಆದ ಶ್ರೀ ಜೆ.ಎಂ ಜೋಶಿರವರು ಪ್ರತಿಭಾ ಪುರಸ್ಕೃತ ವಿದ್ಯಾರ್ಥಿಗಳನ್ನು ಸನ್ಮಾನಿಸಿ ಮಾತನಾಡುತ್ತಾ ಶಿಕ್ಷಣ, ಶಿಕ್ಷಕ, ಸಮಾಜವನ್ನು ಮುಖ್ಯ ಭೂಮಿಕೆಯಲ್ಲಿ ಇಟ್ಟುಕೊಂಡು ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘವು ಅನೇಕ ಶೈಕ್ಷಣಿಕ ಕಾರ್ಯಕ್ರಮಗಳನ್ನು ರೂಪಿಸಿ ಶಿಕ್ಷಣ ವ್ಯವಸ್ಥೆಯ ಸುಧಾರಣೆಗಾಗಿ ಹೋರಾಟವನ್ನು ಮಾಡಿರುವ ವಿಷಯಗಳನ್ನು ತಿಳಿಸಿದರು. ಪ್ರತಿಭಾ ಪುರಸ್ಕಾರ ಕಾರ್ಯಕ್ರಮದ ಯಶಸ್ಸಿಗಾಗಿ ಕಾರಣಕರ್ತರಾದ ಪದಾಧಿಕಾರಿಗಳ ಶ್ರಮವನ್ನು ಅಭಿನಂದಿಸಿದರು. ಹಿನ್ನೆಲೆ ಗಾಯಕರು, ಸಂಗೀತ ಶಿಕ್ಷಕರು, ಎದೆ ತುಂಬಿ ಹಾಡುವೆನು ಖ್ಯಾತಿಯ ಶ್ರೀಮತಿ ಓಹಿಲೇಶ್ವರಿರವರು ಸುಶ್ರಾವ್ಯವಾಗಿ ವಂದೇಮಾತರಂ ಹಾಡುವುದರೊಂದಿಗೆ ಕಾರ್ಯಕ್ರಮ ಯಶಸ್ವಿಯಾಗಿ ಸಂಪನ್ನವಾಯಿತು.

●

# 37ನೇ ವರ್ಷದ ಪ್ರತಿಭಾ ಪುರಸ್ಕಾರ ಸಮಾರಂಭ

■ ಶ್ರೀ ವೆಂಕಟರಮಣ ದೇವರು ಭಟ್ಟ
ಬೆಂಗಳೂರು

ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ, ಬೆಂಗಳೂರು ದಕ್ಷಿಣ ಜಿಲ್ಲೆಯವತಿಯಿಂದ 2023-24ನೇ ಶೈಕ್ಷಣಿಕ ವರ್ಷದಲ್ಲಿ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ಶಾಲಾ ಪ್ರಥಮಿಗರನ್ನು, ಶಿಕ್ಷಕರ ಮಕ್ಕಳನ್ನು ಹಾಗೂ ದಿವ್ಯಾಂಗರನ್ನು ಪುರಸ್ಕರಿಸುವ 37ನೇ ವರ್ಷದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ದಿನಾಂಕ 01-08-2024 ರಂದು ಗ್ಲೋಬಲ್ ಸಿಟಿ ಇಂಟರ್ ನ್ಯಾಷನಲ್ ಸ್ಕೂಲ್ ಪದವಿ ಪೂರ್ವ ವಿದ್ಯಾಲಯ ಮಲ್ಲೇಶ್ ಪಾಳ್ಯದಲ್ಲಿ ಹಮ್ಮಿಕೊಳ್ಳಲಾಗಿತ್ತು. ವೈಭವೋಪೇತ ಸಭಾಭವನದಲ್ಲಿ ಕಾರ್ಯಕ್ರಮ ಸುಂದರವಾಗಿ ಮೂಡಿ ಬಂತು.

ಸಂಘದ ಹಿರಿಯ ಕಾರ್ಯಕರ್ತರಾದ ಶ್ರೀಮತಿ ಮಾಯಾ ಪ್ರಭುರವರು ವಿದ್ಯಾಧಿದೇವತೆ ಸರಸ್ವತಿ ಮತ್ತು ಜನ್ಮಭೂಮಿ ಭಾರತಮಾತೆಯ ಪ್ರಾರ್ಥನೆಯನ್ನು ಸುಶ್ರಾವ್ಯವಾಗಿ ಹಾಡುವುದರ ಮೂಲಕ ಕಾರ್ಯಕ್ರಮಕ್ಕೆ ಶುಭಾರಂಭವನ್ನು ಕೋರಿದರು.

ಶ್ರೀ ಬಿ.ಎ, ಸುರೇಂದ್ರ, ರಾಜ್ಯ ಖಜಾಂಚಿಗಳು, ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ ಇವರು ಮುಖ್ಯ ಅತಿಥಿಗನ್ನು ಪರಿಚಯಿಸಿ ಸ್ವಾಗತ ಕೋರಿದರು. ಗಣ್ಯರು ದೀಪಪ್ರಜ್ವಲನೆಯ ಮೂಲಕ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದ ಉದ್ಘಾಟನೆ ಮಾಡಿ ಚಾಲನೆ ನೀಡಿದರು.

ಶ್ರೀಗಂಗಾಧರಾಚಾರಿ ಉಪಾಧ್ಯಕ್ಷರು ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ ರವರಿಂದ ಪ್ರಾಸ್ತಾವಿಕ ಮಾತನಾಡಿ ಸಂಘಟನೆಯ ಆವಶ್ಯಕತೆ, 1965 ರಲ್ಲಿ ಪ್ರಾರಂಭವಾದ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಸಾಧನೆಯ ಹೆಜ್ಜೆಯ ಗುರುತುಗಳನ್ನು ಪಕ್ಷಿನೋಟದಲ್ಲಿ ವಿವರಿಸಿದರು. ಈ ಸಂಘವು ಶಿಕ್ಷಕರು ವಿದ್ಯಾರ್ಥಿಗಳು ಮತ್ತು ಸಮಾಜದ ಮಧ್ಯೆ ಕೊಂಡಿಯಾಗಿ ಹೇಗೆ ತನ್ನನ್ನು ಸಮರ್ಪಿಸಿಕೊಂಡಿದೆ ಎಂಬುದನ್ನು ತಿಳಿಸಿದರು. ಶ್ರೀ ಚನ್ನಕೃಷ್ಣಪ್ಪ ಖಜಾಂಚಿಗಳು, ಕೆ.ಆರ್.ಎಂ.ಎಸ್.ಎಸ್ ಬೆಂಗಳೂರು ದಕ್ಷಿಣ ಜಿಲ್ಲೆ ರವರಿಂದ ಪುರಸ್ಕಾರ ಸ್ವೀಕರಿಸಲಿರುವ ವಿದ್ಯಾರ್ಥಿಗಳಿಗೆ ಸಂಕಲ್ಪ ಬೋಧನೆ ಮಾಡಲ್ಪಟ್ಟಿತು.

ಮುಖ್ಯ ಅತಿಥಿಗಳಾದ ಡಾ॥ ಕರುಣಾಕರ ರೈ ಬಿ. ಸದಸ್ಯರು ಕಾರ್ಯಕಾರಿ ಪರಿಷತ್ತು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ ರವರು ದಿವ್ಯಾಂಗರನ್ನು ಮತ್ತು ಶಿಕ್ಷಕರ ಮಕ್ಕಳನ್ನು ಪುರಸ್ಕರಿಸಿ ಸಂಘ ನಡೆಸುತ್ತಿರುವ ಈ ಉತ್ತಮ ಕಾರ್ಯವನ್ನು ಪ್ರಶಂಸಿಸಿದರು. ಸಮಾಜದಲ್ಲಿ ವಿದ್ಯಾರ್ಥಿಗಳಲ್ಲಿನ ಪ್ರತಿಭೆಯನ್ನು ಗುರುತಿಸುವ, ಆ ಪ್ರತಿಭೆಗೆ ನೀರೆರೆಯುವ, ಅವರನ್ನು ಪ್ರೋತ್ಸಾಹಿಸುವ ಕೆಲಸ ಆಗಬೇಕಾಗಿದೆ. ಪ್ರತಿಭಾ ಪುರಸ್ಕಾರ ವಿದ್ಯಾರ್ಥಿಗಳಿಗೆ ಪ್ರೇರಣೆ ನೀಡಿ ಜವಾಬ್ದಾರಿಯನ್ನು ಹೆಚ್ಚಿಸುತ್ತದೆ. ಎಷ್ಟೋ ಅಂಗವಿಕಲರು, ದುರ್ಬಲರು, ಅವಕಾಶವಂಚಿತರು ಸತತ ಕಠಿಣ ಸಾಧನೆಯಿಂದ ಪ್ರಪಂಚವನ್ನು ತಮ್ಮತ್ತ ಆಕರ್ಷಿಸಿ ಇಂದು ಜಗದ್ವಿಖ್ಯಾತರಾಗಿದ್ದಾರೆ. ಹಾಗೆಯೇ ನಮ್ಮ ವಿದ್ಯಾರ್ಥಿಗಳೂ ಸಹ ಶ್ರೇಷ್ಠ ಸಾಧನೆ ಮಾಡಬೇಕೆಂದು ಹಲವಾರು ದೃಷ್ಟಾಂತಗಳ ಮೂಲಕ ಮಾರ್ಗದರ್ಶನ ಮಾಡಿದರು.

ನೆನಪಿನ ಕಾಣಿಕೆ ಮತ್ತು ಸ್ಮರಣಿಕೆಗಳ ದಾನಿಗಳಾದ ಶ್ರೀ ಚಂದ್ರಕಾಂತ ಕೋನಿಡೆಲ, ವ್ಯವಸ್ಥಾಪಕ ನಿರ್ದೇಶಕರು ನವಜ್ಯೋತಿ ಶೆಲ್ಟರ್ಸ್ ಪ್ರೈ ಲಿಮಿಟೆಡ್ ರವರು ಪ್ರತಿಭಾಪುರಸ್ಕಾರವನ್ನು ಪಡೆಯುತ್ತಿರುವ ವಿದ್ಯಾರ್ಥಿಗಳಿಗೆ ಅಭಿನಂದನೆಗಳನ್ನು ಹೇಳುತ್ತ – ದೊಡ್ಡ ಗುರಿಯನ್ನಿಟ್ಟುಕೊಂಡು ಅದರ ಸಾಧನೆಗಾಗಿ ಅಷ್ಟೇ ಪರಿಶ್ರಮವನ್ನೂ ಸಹ ಪಡಬೇಕೆಂದರು. ಒಮ್ಮೆಲೇ ಫಲಸಿಗದಿದ್ದರೂ ಮತ್ತೆ ಮತ್ತೆ ಪ್ರಯತ್ನಪಟ್ಟರೆ ಉತ್ತಮ ಫಲ ಸಿಕ್ಕೇ ಸಿಗುತ್ತದೆ ಎಂಬುದನ್ನು ವಿದೇಶದಲ್ಲಿ ಅಧ್ಯಯನ ಮಾಡುತ್ತಿರುವಾಗ ವಿದ್ಯಾರ್ಥಿಜೀವನದ ತಮ್ಮ ಯಶಸ್ಸಿನ ಗುಟ್ಟನ್ನು ನಿದರ್ಶನದ ಮೂಲಕ ವಿದ್ಯಾರ್ಥಿಗಳಿಗೆ ಮನಮುಟ್ಟುವಂತೆ ತಿಳಿಸಿ ಕೊಟ್ಟರು. ಮತ್ತು ದೇಶಭಕ್ತಿಯನ್ನು ಹೆಚ್ಚಿಸಿ ಕೊಂಡು ಈ ದೇಶದ ರಕ್ಷಣೆಗಾಗಿ ಹಾಗೂ ಅಭಿವೃದ್ಧಿಗಾಗಿ ನಮ್ಮ ಕೊಡುಗೆಯನ್ನು ಸಮರ್ಪಿಸಬೇಕೆಂದು ತಿಳಿಹೇಳಿದರು.

ಕಾರ್ಯಕ್ರಮದ ಅಧ್ಯಕ್ಷರಾದ ಶ್ರೀಸಂದೀಪ ಬೂದಿಹಾಳ ಅಧ್ಯಕ್ಷರು, ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ ರವರು ಮಾತನಾಡಿ – ಪ್ರತಿಭಾ ಪುರಸ್ಕಾರದ ಮಹತ್ವ, ಸಂಘ 37 ವರ್ಷಗಳಿಂದ ನಡೆಸಿಕೊಂಡು ಬರುತ್ತಿರುವ ಪ್ರತಿಭಾಪುರಸ್ಕಾರದ ವೈಶಿಷ್ಟ್ಯವನ್ನು ವಿವರಿಸಿದರು. ಮತ್ತು ವಿದ್ಯಾರ್ಥಿಯ ಜೀವನದಲ್ಲಿ ಪ್ರತಿ ಹಂತದಲ್ಲೂ ಸವಾಲುಗಳು ಬರುತ್ತಿರುತ್ತವೆ. ಧೈರ್ಯದಿಂದ ಅವುಗಳನ್ನು ಎದುರಿಸಿದರೆ ಯಶಸ್ಸು ಖಂಡಿತ ಸಿಗುತ್ತದೆ ಎಂದು ಉದಾಹರಣೆಗಳನ್ನು ನೀಡಿ ವಿದ್ಯಾರ್ಥಿಗಳನ್ನು ಹುರಿದುಂಬಿಸಿದರು.

ಸಂಘದ ಸಕ್ರಿಯ ಕಾರ್ಯಕರ್ತರಾದ ಶ್ರೀಮತಿ ಇಂದ್ರಾಣಿ ಸಹಶಿಕ್ಷಕರು ಜೂನಿಯರ್ ಕಾಲೇಜು ಕಾಡುಗುಡಿ ರವರು ವಂದನಾರ್ಪಣೆ ಮಾಡಿದರು. ಶ್ರೀಮತಿ ಮಾಯಾ ಪ್ರಭುರವರು ಸುಮಧುರವಾಗಿ ಹಾಡಿದ ವಂದೇ ಮಾತರಂ ಗಾಯನದೊಂದಿಗೆ ಕಾರ್ಯಕ್ರಮವು ಮುಕ್ತಾಯವಾಯಿತು.

# ಗುರುವಂದನಾ ಕಾರ್ಯಕ್ರಮ – ಬೀದರ್ ಜಿಲ್ಲೆ

ಜೀವನದಲ್ಲಿ ಜನ್ಮ ನೀಡಿದ ತಂದೆ-ತಾಯಿ ಹಾಗೂ ವಿದ್ಯೆ ಕಲಿಸಿದ ಗುರುವನ್ನು ಎಂದೂ ಮರೆಯಬಾರದು ಎಂದು ಭಾರತೀಯ ಶಿಕ್ಷಣ ಮಂಡಲದ ಉತ್ತರ ಪ್ರಾಂತದ ಮಹಿಳಾ ಪ್ರಕಲ್ಪ ಪ್ರಮುಖ ಪ್ರತಿಭಾ ಚಾಮಾ ಹೇಳಿದರು. ನಗರದ ಅರುಣೋದಯ ಹಿರಿಯ ಪ್ರಾಥಮಿಕ ಹಾಗೂ ಪ್ರೌಢಶಾಲೆಯಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಗುರುವಂದನೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ ಗುರು ಕರುಣೆ ಇಲ್ಲದೆ ಎತ್ತರಕ್ಕೆ ಬೆಳೆಯಲು ಸಾಧ್ಯವಿಲ್ಲ. ಹೀಗಾಗಿ ಗುರುವಿನ ಮಾರ್ಗದರ್ಶನ ಬಹಳ ಅವಶ್ಯಕ ಎಂದು ತಿಳಿಸಿದರು. ಮಂಡಳದ ಶಿಕ್ಷಕ ಪ್ರಕೋಷ್ಠದ ಸಂಚಾಲಕ ಬಸವರಾಜ ಸ್ವಾಮಿ ಮಾತನಾಡಿ ಭಾರತೀಯ ಸಂಸ್ಕೃತಿಯಲ್ಲಿ ಗುರುವಿನ ಉನ್ನತ ಸ್ಥಾನವಿದೆ ಎಂದರು. ಮಾಧ್ಯಮಿಕ ಶಿಕ್ಷಕ ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ಪರಮೇಶ್ವರ ಬಿರಾದಾರ್ ಮಾತನಾಡಿ, ಹರ ಮುನಿದರೆ ಗುರು ಕಾಯುವನು ಎಂಬ ಗಾದೆ ಗುರುವಿನ ಮಹತ್ವವನ್ನು ಬಿಂಬಿಸುತ್ತದೆ ಎಂದರು. ಅಧ್ಯಕ್ಷತೆ ವಹಿಸಿದ್ದ ಶಾಲೆ ಆಡಳಿತಾಧಿಕಾರಿ ಸಂತೋಷಕುಮಾರ ಮಂಗಳೂರೆ ಮಾತನಾಡಿ, ಮಕ್ಕಳು ನಿತ್ಯ ಪಾಲಕರ ಪಾದಕ್ಕೆ ನಮಸ್ಕರಿಸಬೇಕು. ಒಳ್ಳೆಯ ಸಂಸ್ಕಾರ ಬೆಳೆಸಿಕೊಳ್ಳಬೇಕು ಎಂದರು. ಶಿಕ್ಷಕ ಸಂಘದ ಜಿಲ್ಲಾ ಗೌರವಾಧ್ಯಕ್ಷ ವಿಜಯಕುಮಾರ ಪಾಟೀಲ್ ಯರನಳ್ಳಿ ಮಾತನಾಡಿದರು. ಎಫ್‌ಪಿಎಐ ಸುವರ್ಣ ಮಹೋತ್ಸವ ಅಂಗವಾಗಿ ಏರ್ಪಡಿಸಿದ್ದ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು. ಮಕ್ಕಳು ಪಾಲಕರ ಪಾದಪೂಜೆ ಮಾಡಿದರು. ಗುರುಗಳಿಗೆ ನೆನಪಿನ ಕಾಣಿಕೆ ನೀಡಲಾಯಿತು. ನೀಲಮ್ಮ ಗಜಲೆ ಸ್ವಾಗತಿಸಿದರು. ಲಕ್ಷ್ಮಣ ಪೂಜಾರಿ, ಅಲ್ಲಾವತಿ ಹೊಸದೊಡ್ಡೆ ನಿರೂಪಣೆ ಮಾಡಿದರು. ಭಾರತೀಯ ಶಿಕ್ಷಣ ಮಂಡಲದ ಉತ್ತರ ಪ್ರಾಂತ, ಮಾಧ್ಯಮಿಕ ಶಿಕ್ಷಕ ಸಂಘದ ಜಿಲ್ಲಾ ಘಟಕದಿಂದ ಕಾರ್ಯಕ್ರಮ ಆಯೋಜಿಸಲಾಗಿತ್ತು.

➢ ಪುಟ 6 ರಿಂದ.....

ಸುರೇಂದ್ರ ಅವರ ನಿವೃತ್ತಿಯಾದ ದಿನವಾದ 31.07.2024 ರಂದು ಹಮ್ಮಿಕೊಂಡ ಅಭಿನಂದನಾ ಕಾರ್ಯಕ್ರಮದಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ಕ್ಷೇತ್ರಿಯ ಕಾರ್ಯವಾಹರಾದ ತಿಪ್ಪೇಸ್ವಾಮಿಯವರು, ಶಿಕ್ಷಕ ಸಂಘದ ಪದಾಧಿಕಾರಿಗಳು, ವಿವಿಧ ಸಂಘಟನೆಯ ಪದಾಧಿಕಾರಿಗಳೂ, ವಿವಿಧ ಶಾಲಾ ಆಡಳಿತ ಮಂಡಳಿಯ ಪ್ರಮುಖರು ಹಾಗೂ ರಾಜಕೀಯ ಮುಖಂಡರು, ಅಪಾರ ಶಿಷ್ಯ ಬಳಗ, ಹಿತೈಷಿಗಳು ಭಾಗವಹಿಸಿ ಶುಭ ಕೋರಿದರು, ಅದರಂತೆ ಅವರ ಸೇವಾ ಕಾರ್ಯವನ್ನು ಶಿಕ್ಷಕ ಸಂಘ ಸ್ಮರಿಸುತ್ತದೆ ಹಾಗೂ ಶಿಕ್ಷಕ ಸಂಘ ಕಾರ್ಯ ಬೆಳೆಯಲು ಕಾರ್ಯಕರ್ತರಿಗೆ ಮಾರ್ಗದರ್ಶನ ನೀಡುತ್ತಾ ಮುಂದುವರಿಯಲು ಅಪೇಕ್ಷಿಸಿ ನಿವೃತ್ತಿಯ ಜೀವನಕ್ಕೆ ಶುಭ ಕೋರುತ್ತದೆ.

## ಶ್ರೀ ಮಲ್ಲಿಕಾರ್ಜುನ ಕೂಡಗಿ

ಶ್ರೀ ಮಲ್ಲಿಕಾರ್ಜುನ.ಜಿ.ಕೂಡಗಿ ರವರು ಶ್ರೀ ಗುರುಪಾದಪ್ಪ ಮತ್ತು ಕಾಳಮ್ಮ ಇವರ ಸುಪುತ್ರರಾಗಿ 20–07–1964ರಂದು ವಿಜಯಪುರ ಜಿಲ್ಲೆಯ ಮನಗೂಳಿಯಲ್ಲಿ ಜನಿಸಿದರು. ಇವರು ಶಾಲಾ ಶಿಕ್ಷಣವನ್ನು ವಿಜಯಪುರದಲ್ಲಿ ಮುಗಿಸಿದರು. ನಂತರ ಸಿಪಿಎಡ್ ಶಿಕ್ಷಣವನ್ನು ಮುಗಿಸಿ ಬೆಂಗಳೂರಿನ ಸೆಂಟ್ ಅಲ್ಫೋನ್ಸಸ್ ಪ್ರೌಢಶಾಲೆಯಲ್ಲಿ ಉತ್ತಮ ದೈಹಿಕ ಶಿಕ್ಷಕರಾಗಿ ತಮ್ಮ ಸೇವೆಯನ್ನು ಪ್ರಾರಂಭಿಸಿದರು. ಜಿಲ್ಲಾ ಮಟ್ಟದಲ್ಲಿ ಸತತವಾಗಿ 17 ವರ್ಷಗಳ ಕಾಲ ಖೋ ಖೋ ಸ್ಪರ್ಧೆಯಲ್ಲಿ ತಮ್ಮ ಶಾಲೆಯನ್ನು ಪ್ರಥಮ ಸ್ಥಾನದಲ್ಲೇ ಇರುವಂತೆ ವಿದ್ಯಾರ್ಥಿಗಳನ್ನು ತರಬೇತಿ ನೀಡಿದ್ದರು. ಫುಟ್‌ಬಾಲ್ ಆಟದಲ್ಲಿ ವಿದ್ಯಾರ್ಥಿಗಳು ರಾಷ್ಟ್ರಮಟ್ಟದಲ್ಲಿ ಭಾಗವಹಿಸಲು ಉತ್ತಮ ತರಬೇತಿ ನೀಡಿದ್ದರು. ಜಿಲ್ಲಾ ಮಟ್ಟದ ಹಾಗೂ ರಾಜ್ಯ ಮಟ್ಟದ ಖೋ ಖೋ ಮತ್ತು ಕಬಡ್ಡಿ ಸ್ಪರ್ಧೆಗಳಲ್ಲಿ ತೀರ್ಪುಗಾರರಾಗಿ ಕಾರ್ಯನಿರ್ವಹಿಸಿದ್ದಾರೆ.

ಮಾಧ್ಯಮಿಕ ಶಿಕ್ಷಕ ಸಂಘದಲ್ಲಿ ಬೆಂಗಳೂರು ಉತ್ತರ ವಲಯ–3 ಅಧ್ಯಕ್ಷರಾಗಿ, ಉತ್ತರ ಜಿಲ್ಲಾ ಅಧ್ಯಕ್ಷರಾಗಿ, ವಿಭಾಗ ಪ್ರಮುಖರಾಗಿ ಸೇವೆ



ಸಲ್ಲಿಸಿದ್ದಾರೆ. ಉತ್ತಮ ಸಂಘಟಕರಾಗಿ ಶಿಕ್ಷಕ ಸಂಘದ ಬೆಳವಣಿಗೆಗೆ ತಮ್ಮ ಕೊಡುಗೆಯನ್ನು ನೀಡಿದ್ದಾರೆ. ರಾಜ್ಯ ಸಂಘ ನೀಡಿರುವ ಕಾರ್ಯಕ್ರಮಗಳಾದ ಗುರುವಂದನಾ ಕಾರ್ಯಕ್ರಮ, ಪ್ರತಿಭಾ ಪುರಸ್ಕಾರ, ಶಿಕ್ಷಕ ಕಾರ್ಯಾಗಾರಗಳು, ಫೋನ್‌ಇನ್ ಕಾರ್ಯಕ್ರಮ, ಸಂಕಲ್ಪ ದಿನಾಚರಣೆ ಇತ್ಯಾದಿಗಳನ್ನು ಪದಾಧಿಕಾರಿಗಳ ಜೊತೆಗೂಡಿ ಯಶಸ್ವಿಯಾಗಿ ನಿರ್ವಹಿಸುತ್ತಿದ್ದರು. ಎಬಿಆರ್‌ಎಸ್‌ಎಂನ 8ನೇ ರಾಷ್ಟ್ರೀಯ ಅಧಿವೇಶನದಲ್ಲಿ "ಯಾತಾ ಯಾತ್" ಜವಾಬ್ದಾರಿಯನ್ನು ಕಾರ್ಯಕರ್ತರ ಜೊತೆಗೂಡಿ ಅಹೋ ರಾತ್ರಿ ಯಶಸ್ವಿಯಾಗಿ ನಿರ್ವಹಿಸಿದ್ದು, ಶ್ಲಾಘನೀಯ. ಸಾರ್ವಜನಿಕ ಶಿಕ್ಷಣ ಇಲಾಖೆ ಬೆಂಗಳೂರು ಉತ್ತರ ಜಿಲ್ಲೆಯಲ್ಲಿ ಗಟ್ಟಿ ಧ್ವನಿಯಲ್ಲಿ ಸಭೆಗಳಲ್ಲಿ ಮಾತನಾಡಿ ನಮ್ಮ ಶಿಕ್ಷಕ ಸಂಘದ ಪದಾಧಿಕಾರಿಗಳನ್ನು ಎಲ್ಲ ಕಾರ್ಯಕ್ರಮಗಳಿಗೆ ಆಹ್ವಾನಿಸಬೇಕು ಹಾಗೂ ನಮ್ಮ ಶಿಕ್ಷಕ ಸಂಘದ ಹೆಸರನ್ನು ಎಲ್ಲಾ ಸರ್ಕಾರಿ ಆದೇಶಗಳಲ್ಲಿ ಪ್ರಕಟಿಸುವಂತೆ ಒತ್ತಾಯ ಮಾಡುವುದರ ಜೊತೆಗೆ ಕೆಲಸ ಪೂರ್ಣವಾಗುವವರೆಗೂ ಗಮನಿಸುತ್ತಿದ್ದರು. ಶಿಕ್ಷಣ ಹಾಗೂ ಶಿಕ್ಷಕರ ಸಮಸ್ಯೆಗಳನ್ನು ಬಗೆಹರಿಸಲು ಸತತ ಪ್ರಯತ್ನ ಮಾಡಿ ಯಶಸ್ವಿಗೊಳಿಸುತ್ತಿದ್ದರು.

ಶಿಕ್ಷಕ ಸಂಘವು ಇವರ ಕಾರ್ಯವನ್ನು ಶ್ಲಾಘಿಸಿ, ಅಭಿನಂದಿಸುತ್ತದೆ. ಇವರ ನಿವೃತ್ತಿಯ ಜೀವನವು ಆರೋಗ್ಯಕರವಾಗಿ ಹಾಗೂ ಸಂತೋಷದಾಯಕವಾಗಿರಲೆಂದು ಮಾಧ್ಯಮಿಕ ಶಿಕ್ಷಕ ಸಂಘವು ಶುಭಕೋರುತ್ತದೆ.

# ಕ.ರಾ.ಮಾ.ಶಿ.ಸಂಘ(ರಿ.) ಬೆಂಗಳೂರು, ಕಾರ್ಯಕಾರಣಿ & ಸಾಮಾನ್ಯ ಸಭೆ

ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ರಾಜ್ಯ ಕಾರ್ಯಕಾರಿಣಿ ಸಭೆ ದಿನಾಂಕ: 28–07–2024ರ ಭಾನುವಾರ ಬೆಂಗಳೂರಿನ ಕೇಂದ್ರ ಕಾರ್ಯಾಲಯ ಯಾದವಸ್ಮೃತಿಯಲ್ಲಿ ಜರುಗಿತು.

ಮೊದಲನೆ ಅವಧಿ: ಉದ್ಘಾಟನಾ ಅವಧಿ: ಈ ಅವಧಿಯಲ್ಲಿ ವೇದಿಕೆಯ ಮೇಲಿದ್ದ ಅಖಿಲ ಭಾರತೀಯ ರಾಷ್ಟ್ರೀಯ ಶೈಕ್ಷಣಿಕ ಮಹಾಸಂಘದ ಅಖಿಲ ಭಾರತದ ಸಹ ಸಂಘಟನಾ ಕಾರ್ಯದರ್ಶಿಗಳಾದ ಮಾನನೀಯ ಶ್ರೀ ಜಿ. ಲಕ್ಷ್ಮಣ ಜಿ ರಾಜ್ಯಾಧ್ಯಕ್ಷರಾದ ಶ್ರೀ ಸಂದೀಪ ಬೂದಿಹಾಳ, ರಾಜ್ಯ ಸಹ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಅನಿಲ ಬಿರಾದಾರ ಹಾಗೂ ರಾಜ್ಯ ಉಪಾಧ್ಯಕ್ಷರಾದ ಶ್ರೀ ಗಂಗಾಧರಾಚಾರಿರವರು ಸರಸ್ವತಿ ಮಾತೆಗೆ ಹೂ ಅರ್ಚನೆ ಮಾಡುವ ಮೂಲಕ ಹಾಗೂ ಸಾಮೂಹಿಕವಾಗಿ ಸರಸ್ವತಿ ವಂದನೆಯೊಂದಿಗೆ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು.

ವೇದಿಕೆಯ ಮೇಲಿರುವ ಸರ್ವರನ್ನು ರಾಜ್ಯ ಸಹ ಪ್ರಧಾನ ಕಾಯದರ್ಶಿಗಳಾದ ಶ್ರೀ ಅನಿಲ ಬಿರಾದಾರರವರು ಸ್ವಾಗತಿಸಿದರು. ರಾಜ್ಯ ಪದಾಧಿಕಾರಿಗಳು ಹಾಗೂ ವಿವಿಧ ಜಿಲ್ಲೆಗಳಿಂದ ಆಗಮಿಸಿದ ಎಲ್ಲರ ಪರಿಚಯ ಹಾಗೂ ಜಿಲ್ಲೆಗಳ ವರದಿಯನ್ನು ಪಡೆಯಲಾಯಿತು. ರಾಜ್ಯ ಉಪಾಧ್ಯಕ್ಷರಾದ ಶ್ರೀ ಗಂಗಾಧರಾಚಾರಿರವರು 2023–24ನೇ ಸಾಲಿನ ಆಯವ್ಯಯವನ್ನು ಮಂಡಿಸಿದರು. ಸರ್ವರ ಸಮ್ಮತಿ ಪಡೆಯಲಾಯಿತು. ರಾಜ್ಯಾಧ್ಯಕ್ಷರಾದ ಶ್ರೀ ಸಂದೀಪ ಬೂದಿಹಾಳರವರು ರಾಜ್ಯದಲ್ಲಿ ಹಾಗೂ ದೇಶದಲ್ಲಿ ನಡೆದ ವಿಶೇಷ ಕಾರ್ಯಕ್ರಮಗಳನ್ನು ಉಲ್ಲೇಖಿಸಿ ಮಾತನಾಡಿದರು. ಶ್ರೀ ಅನಿಲ ಬಿರಾದಾರರವರು ಮುಂಬರುವ ರಾಜ್ಯ ಹಾಗೂ ದೇಶದಲ್ಲಿ ನಡೆಯುವ ಕಾರ್ಯಕ್ರಮಗಳನ್ನು ತಿಳಿಸಿದರು.

**ಮುಂಬರುವ ರಾಜ್ಯ ಹಾಗೂ ರಾಷ್ಟ್ರ ಮಟ್ಟದ ಕಾರ್ಯಕ್ರಮಗಳು**

1. ಪ್ರಾಂತ ಅಭ್ಯಾಸ ವರ್ಗ: ಸೆಪ್ಟೆಂಬರ್ 14 ಮತ್ತು 15 –2024, ಸ್ಥಳ: ಬೆಂಗಳೂರು
2. ಪೂರ್ಣಾವಧಿ ಕಾರ್ಯಕರ್ತರ ಅಖಿಲ ಭಾರತ ಮಟ್ಟದ ಅಭ್ಯಾಸ ವರ್ಗ ದಿನಾಂಕ: ಆ7ಗಸ್ಟ್ 8& 9 2024: ಜೈಪುರ, ರಾಜಸ್ಥಾನ
3. ಅಖಿಲ ಭಾರತ ಮಾಧ್ಯಮ ಪ್ರಕೋಷ್ಠ ಬೈಠಕ್ ದಿನಾಂಕ : 17& 18 ಆಗಸ್ಟ್ : ಸ್ಥಳ : ಭೂಪಾಲ್
4. ಅಖಿಲ ಭಾರತ ಕಾರ್ಯಕಾರಣಿ ಬೈಠಕ್ ಹಾಗೂ ಸಾಮಾನ್ಯ ಸಭೆ, ದಿನಾಂಕ: 4, 5 & 6 ಅಕ್ಟೋಬರ್ 2024– ಸ್ಥಳ ಭೂಪಾಲ್
5. ಅಂತರಾಷ್ಟ್ರೀಯ ಅಧಿವೇಷನ ದಿನಾಂಕ 15 ಫೆಬ್ರವರಿ 2025 ಸ್ಥಳ: ನವದೆಹಲಿ

**ಅವಧಿ–02:** ಶ್ರೀ ಲಕ್ಷ್ಮಣ ಜೀ, ಅಖಿಲ ಭಾರತ ಸಹ ಸಂಘಟನಾ ಮಂತ್ರಿರವರು ಸಂಘಟನೆಯ ವಿಷಯದ ಕುರಿತು ತಮ್ಮ 33 ವರ್ಷದ

ಪುಟ 10 ಕ್ಕೆ ➢

# ಗುರುವಂದನಾ ಕಾರ್ಯಕ್ರಮ – ಬೆಂಗಳೂರು ಉತ್ತರ ಜಿಲ್ಲೆ

24–07–2024 ರ ಬುಧವಾರ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ, ಬೆಂಗಳೂರು ಉತ್ತರ ಜಿಲ್ಲೆಯ ವತಿಯಿಂದ ವ್ಯಾಸ ಮುನಿಗಳು, ವಾಲ್ಮೀಕಿ ಮಹರ್ಷಿಗಳ ನೆನಪಿನಲ್ಲಿ ಗುರುಗಳ ಸೇವೆಗಳನ್ನು ಸ್ಮರಣೆ ಮಾಡುತ್ತಾ ಗುರುಗಳಿಗೆ ಮಹತ್ತರ ಸ್ಥಾನ ನೀಡಿ ಅವರು ನಡೆದ ಹಾದಿ, ಗುರುಗಳ ಮೌಲ್ಯಗಳು, ಆದರ್ಶಗಳನ್ನು ಇಂದಿನ ವಿದ್ಯಾರ್ಥಿಗಳ ಬಾಳಿಗೆ ನೀಡುವಂತಹ "ಗುರುವಂದನಾ" ಕಾರ್ಯಕ್ರಮವನ್ನು ಶ್ರೀರಾಮಪುರದಲ್ಲಿರುವ ಪವನ್ ಪ್ರೌಢಶಾಲೆಯಲ್ಲಿ ವಿಭಿನ್ನವಾದ ರೀತಿಯಲ್ಲಿ ಶಾಲೆಯ ಆಡಳಿತ ಮಂಡಳಿ ಶಿಕ್ಷಕರು ಹಾಗೂ ಮಾಧ್ಯಮಿಕ ಶಿಕ್ಷಕ ಸಂಘದ ಪದಾಧಿಕಾರಿಗಳೊಂದಿಗೆ ಆಚರಿಸಲಾಯಿತು.

ಬೆಂಗಳೂರು ಉತ್ತರ ಜಿಲ್ಲೆಯ ಕಾರ್ಯದರ್ಶಿಗಳಾದ ಶ್ರೀ ಬಿ.ಆರ್.ಹರಿದಾಸ್‌ರವರ ಸುಶ್ರಾವ್ಯ ಪ್ರಾರ್ಥನೆಯೊಂದಿಗೆ ಕಾರ್ಯಕ್ರಮ ಪ್ರಾರಂಭವಾಯಿತು. ಕರ್ನಾಟಕ ರಾಜ್ಯ ಮಾಧ್ಯಮಿಕ ಸಂಘ, ಬೆಂಗಳೂರು ಉತ್ತರ ಜಿಲ್ಲೆಯ ಅಧ್ಯಕ್ಷರಾದ ಶ್ರೀ ಮಲ್ಲಿಕಾರ್ಜುನ ಕೂಡಗಿರವರು ವೇದಿಕೆಯ ಮೇಲಿನ ಗಣ್ಯರನ್ನು ಹಾಗೂ ಸಭೆಯಲ್ಲಿ ಹಾಜರಿದ್ದ ಎಲ್ಲರನ್ನೂ ಹಾರ್ದಿಕವಾಗಿ ಸ್ವಾಗತಿಸಿದರು. ನಂತರ ವೇದಿಕೆಯಲ್ಲಿರುವ ಗಣ್ಯರು ಹಾಗೂ ಪದಾಧಿಕಾರಿಗಳು ವ್ಯಾಸ ಮಹರ್ಷಿಗಳು ಹಾಗೂ ಗುರುಗಳ ಭಾವಚಿತ್ರಗಳಿಗೆ ಪುಷ್ಪಾರ್ಚನೆ ಮಾಡುವುದರ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಸಭಾ ಕಾರ್ಯಕ್ರಮದ ನಿರೂಪಣೆಯನ್ನು ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ, ಬೆಂಗಳೂರು ಉತ್ತರ–3ರ ಅಧ್ಯಕ್ಷರಾದ ಶ್ರೀ ಗಂಗಾಧರ.ಎಂ.ವಿರವರು ಉತ್ತಮ ರೀತಿಯಲ್ಲಿ ನಡೆಸಿಕೊಟ್ಟರು. ಬೆಂಗಳೂರು ಉತ್ತರ ಜಿಲ್ಲೆ ಹಾಗೂ ಗ್ರಾಮಾಂತರ ಜಿಲ್ಲೆಯ ವಿಭಾಗ ಪ್ರಮುಖರಾದ ಗಂಗಪ್ಪರವರು ತಮ್ಮ ಪ್ರಾಸ್ತಾವಿಕ ಭಾಷಣದಲ್ಲಿ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘವು 1965ರಲ್ಲಿ ಉದಯವಾಗಿ ಶ್ರೀಯುತ ಕೆ.ನರಹರಿಯನವರ ಮಾರ್ಗದರ್ಶನದಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಯಶಸ್ವಿಯಾಗಿ ಶಿಕ್ಷಕರು ಹಾಗೂ ವಿದ್ಯಾರ್ಥಿಗಳಿಗೆ ಉಪಯುಕ್ತವಾಗಿದೆ ಎಂದು ತಿಳಿಸಿದರು. ಪವನ್ ಆಂಗ್ಲ ಶಾಲೆಯ ಹಿರಿಯ ಮುಖ್ಯ ಶಿಕ್ಷಕರಾಗಿದ್ದಂತಹವರು ಶಿಕ್ಷಣ ವ್ಯವಸ್ಥೆ ಬಗ್ಗೆ ಮಾತನಾಡಿದರು.

ಪವನ್ ಆಂಗ್ಲ ಪ್ರೌಢಶಾಲೆಯ ಸಂಸ್ಥಾಪಕರು, ಪ್ರಾಂಶುಪಾಲರು ಹಾಗೂ ಸಂಸ್ಕೃತ ಪಂಡಿತರು ಆದ ಡಾ॥ ಪ್ರಭಾ ಶ್ರೀಧರ್‌ರವರು ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಗುರು ಪರಂಪರೆಯನ್ನು ಸ್ಮರಿಸುತ್ತಾ ಮಹರ್ಷಿ ವಾಲ್ಮೀಕಿ, ವೇದವ್ಯಾಸರ ಕುರಿತು ಅನೇಕ ಮಹತ್ವದ ವಿಷಯಗಳನ್ನು ತಿಳಿಸಿದರು. ಸಂಸ್ಕೃತ ಭಾಷೆಯ ಮಹತ್ವ ಮತ್ತು ಜ್ಞಾನ ವೃದ್ಧಿಯನ್ನು ಮಾಡಿಕೊಂಡು ಶಿಕ್ಷಕರು ಯಾವ ರೀತಿ ಸುಸಂಸ್ಕೃತರಾಗಿರಬೇಕು ಎಂದು ತಿಳಿಸಿಕೊಟ್ಟರು. ಶಾಲೆಯ ಮುಖ್ಯ ಶಿಕ್ಷಕರಾದ ಶ್ರೀಮತಿ ಜಯಲಕ್ಷ್ಮಿಯವರು ಉಪಸ್ಥಿತರಿದ್ದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ನಾರಾಯಣ ಭಟ್‌ರವರು ಶಿಕ್ಷಣ ಹಾಗೂ ಶಿಕ್ಷಕ ಕಾರ್ಯಕ್ರಮಗಳನ್ನು ಮೆಲುಕು ಹಾಕುವ ಕಾರ್ಯಕ್ರಮ ಗುರುವಂದನಾ ಕಾರ್ಯಕ್ರಮ ಎಂದು ತಿಳಿಸುತ್ತಾ ಏಕೋ ದೇವಃ ಸರ್ವಭೂತೇಷು ಗೂಢಃ ಹಾಗೂ ನಹಿ ಜ್ಞಾನೇನ ಸದೃಶಂ ಎಂಬ ಸಂಸ್ಕೃತದ ಮಹತ್ವವನ್ನು ಸಾರುತ್ತಾ ಗುರು ಪೂರ್ಣಿಮೆಯ ಮಹಿಮೆಯನ್ನು ತಿಳಿಸಿದರು. ಬೆಂಗಳೂರು ಉತ್ತರ ವಲಯ–3ರ ಕಾರ್ಯದರ್ಶಿ ಶ್ರೀ ಕಿರಣ್ ಕುಮಾರ್‌ರವರು ವಂದನಾರ್ಪಣೆ ನಡೆಸಿಕೊಟ್ಟರು. ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಕಾರ್ಯಾಲಯ ಪ್ರಮುಖರು ಹಾಗೂ ಬೆಂಗಳೂರು ಉತ್ತರ ಜಿಲ್ಲೆಯ ಗೌರವಾಧ್ಯಕ್ಷರು ಆದ ಶ್ರೀ ಜೆ.ಎಂ ಜೋಷಿಯವರು ಹಾಗೂ ಎಲ್ಲಾ ಪದಾಧಿಕಾರಿಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಸಾಮೂಹಿಕ ಶಾಂತಿ ಮಂತ್ರದೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

ವರದಿ : ಶ್ರೀ ಗಂಗಾಧರ ಎಂ.ವಿ,

➤ ಪುಟ 9 ರಿಂದ.....

ಅನುಭವದ ಮೂಲಕ ಪ್ರೇರಣಾದಾಯಕವಾದ ಮಾಡನಾಡಿದರು. ಸಂಘಕ್ಕೆ ಸದಸ್ಯತ್ವವೇ ಜೀವಾಳ, ಅದರಂತೆ ಎಲ್ಲ ರಾಜ್ಯ ಹಾಗೂ ಜಿಲ್ಲಾ ಪದಾಧಿಕಾರಿಗಳ ಜೊತೆ ಚರ್ಚಿಸಿ ಎಲ್ಲರ ಒಮ್ಮತದ ದಿನಾಂಕವನ್ನು ನಿರ್ಧರಿಸಿದರು. ಆಗಸ್ಟ್ 1 ರಿಂದ 31ರ ವರೆಗೆ ಸದಸ್ಯತಾ ಅಭಿಯಾನವನ್ನು ನಡೆಸಿ ಹೆಚ್ಚಿನ ಸದಸ್ಯತ್ವವನ್ನು ಮಾಡಲು ತಿಳಿಸಿದರು.

**ಅವಧಿ : 03:** ಈ ಅವಧಿಯಲ್ಲಿ ವೇದಿಕೆಯ ಮೇಲಿದ್ದ ಶ್ರೀ ವೃಷಬೇಂದ್ರಸ್ವಾಮಿ ರಾಜ್ಯ ಸಂಘಟನಾ ಕಾರ್ಯದರ್ಶಿಗಳು ಹಾಗೂ ರಾಜ್ಯಾಧ್ಯಕ್ಷರಾದ ಶ್ರೀ ಸಂದೀಪ ಬೂದಿಹಾಳರವರು ಶಿಕ್ಷಕ ಹಾಗೂ ಉಪನ್ಯಾಸಕರ ವಿವಿಧ ಸಮಸ್ಯೆಗಳ ಬಗ್ಗೆ ಚರ್ಚಿಸಿ ಅವುಗಳ ಪಟ್ಟಿ ಮಾಡಿ ಬಗೆಹರಿಸುವ ನಿಟ್ಟಿನಲ್ಲಿ ಕ್ರಮಕೈಗೊಳ್ಳಲಾಗುವುದೆಂದು ತಿಳಿಸಿದರು.

**ಅವಧಿ: 04** ಸಮಾರೋಪ: ಸಮಾರೋಪ ಕಾರ್ಯಕ್ರಮದಲ್ಲಿ ವಿಶೇಷ ಅತಿಥಿಗಳಾಗಿ ಆದರಣೀಯ ಶ್ರೀ ತಿಪ್ಪೇಸ್ವಾಮಿ ಜಿ ಕ್ಷೇತ್ರೀಯ ಕಾರ್ಯವಾಹ ದಕ್ಷಿಣ ಮಧ್ಯ ಕ್ಷೇತ್ರ ರಾಷ್ಟ್ರೀಯ ಸ್ವಯಂಸೇವಕ ಸಂಘ ಇವರು ಆಗಮಿಸಿ ಸಂಘಟನೆಯ ಬಲವರ್ಧನೆ ಹಾಗೂ ಪಂಚಪರಿವರ್ತನೆ ಕುರಿತು ಮಾರ್ಗದರ್ಶನ ಮಾಡಿದರು. ಇದೇ ಸಂದರ್ಭದಲ್ಲಿ ಯಾದಗಿರಿ ಜಿಲ್ಲೆಯ ನೂತನ ಅಧ್ಯಕ್ಷ ಸ್ಥಾನವನ್ನು ಶ್ರೀ ಪ್ರಕಾಶ ವಳಪುರ ಹಾಗೂ ಧಾರವಾಡ ಜಿಲ್ಲಾಧ್ಯಕ್ಷರಾಗಿ ಶ್ರೀ ವೇಣುಗೋಪಾಲ ಹೆಚ್.ಆರ್ ಮತ್ತು ಪ್ರಧಾನ ಕಾರ್ಯದರ್ಶಿಯಾಗಿ ಶ್ರೀಷಣ್ಮುಖ ಅಂಗಡಿರವರ ಹೆಸರುಗಳನ್ನು ರಾಜಾಧ್ಯಕ್ಷರಾದ ಶ್ರೀ ಸಂದೀಪ ಬೂದಿಹಾಳರವರು ಘೋಷಿಸಿದರು. ಸಾಮೂಹಿಕ ಶಾಂತಿಮಂತ್ರದೊಂದಿಗೆ ರಾಜ್ಯ ಕಾರ್ಯಕಾರಿಣಿ ಸಭೆ ಮುಗಿಸಲಾಯಿತು.

## ಅಭಿನಂದನೆಗಳು



**ಡಾ॥ ಆದಿತ್ಯ ಜಿ. ಹಳ್ಳಿಮಾಲ**

ಇವರು ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಕರ್ನಾಟಕದಿಂದ ವೈದ್ಯಕೀಯ ಶಿಕ್ಷಣವನ್ನು (M.B.B.S) 2023ರಲ್ಲಿ ಅತ್ಯುತ್ತಮ ಅಂಕಗಳಿಸಿ ಉತ್ತೀರ್ಣರಾಗಿರುತ್ತಾರೆ. ಇವರು ನಮ್ಮ ಸಂಘದ ಹಿರಿಯ ಕಾರ್ಯಕರ್ತರಾದ ಶ್ರೀಯುತ ಲಕ್ಷ್ಮಣ್‌ರಾವ್‌ರವರ ಮೊಮ್ಮಗರಾಗಿರುತ್ತಾರೆ. ಈ ವಿದ್ಯಾರ್ಥಿಯು ಮಾಧ್ಯಮಿಕ ಶಿಕ್ಷಕ ಸಂಘದ ಬೆಂಗಳೂರು ಉತ್ತರ ಜಿಲ್ಲೆಯ ಪ್ರತಿಭಾ ಪುರಸ್ಕಾರವನ್ನು ಪಡೆದವರಾಗಿರುತ್ತಾರೆ ಎಂಬುದು ಹೆಮ್ಮೆಯ ವಿಷಯ. ಇವರಿಗೆ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘವು ಅಭಿನಂದಿಸುತ್ತದೆ.

# ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ರಘು ಕೊಡುಗೆ ಅಪಾರ: ಕೇಂದ್ರ ಸಚಿವ ಶ್ರೀ ಪ್ರಲ್ಹಾದ್ ಜೋಶಿ



ಹುಬ್ಬಳ್ಳಿ: ಡಾ. ರಘು ಅಕಮಂಚಿ ಒಬ್ಬ ಭಾಗ್ಯಶಾಲಿ ವ್ಯಕ್ತಿ, ಮನೆಯಿಂದ ಸಹಕಾರವಿಲ್ಲದಿದ್ದರೆ ಸಾಮಾಜಿಕ ಕಾರ್ಯ ಮಾಡಲು ಸಾಧ್ಯವಿಲ್ಲ ಇಂದು ರಘು ಅವರ ಸಾಧನೆಗೆ ಅವರ ತಂದೆ ತಾಯಿ, ಮಡದಿ ಮತ್ತು ಮಕ್ಕಳೇ ಕಾರಣ ಎಂದು ಆರ್‌ಎಸ್‌ಎಸ್‌ನ ಅಖಿಲ ಭಾರತೀಯ ವ್ಯವಸ್ಥಾ ಪ್ರಮುಖ ಶ್ರೀ ಮಂಗೇಶ ಭೇಂಡೆ ಹೇಳಿದರು.

ನಗರದ ಬಿವಿಬಿ ಬಯೋಟೆಕ್ ಅಡಿಟೋರಿಯಂ'ನಲ್ಲಿ ರವಿವಾರ ಹಮ್ಮಿಕೊಳ್ಳಲಾಗಿದ್ದ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ ಮತ್ತು ಅಖಿಲ ಭಾರತೀಯ ರಾಷ್ಟ್ರೀಯ ಶಿಕ್ಷಕ ಮಹಾ ಸಂಘಗಳ ವತಿಯಿಂದ 60 ವಸಂತಗಳನ್ನು ಪೂರೈಸಿ ವೃತ್ತಿಯಿಂದ ನಿವೃತ್ತಿ ಹೊಂದಿರುವ ಕೆಆರ್‌ಎಂಎಸ್‌ಎಸ್‌ನ ಸಂಸ್ಥಾಪಕ ಅಧ್ಯಕ್ಷರಾದ ಡಾ. ರಘು ಅಕಮಂಚಿಯವರ ನಿವೃತ್ತಿ ನಿಮಿತ್ತ ಬಾಂಧವ್ಯ ಶಿಕ್ಷಕರ ಪರಿವಾರ ಮಿಲನ ಹಾಗೂ ಅಭಿನಂದನಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಕರ್ನಾಟಕ ಮಹಾವಿದ್ಯಾಲಯ ಶಿಕ್ಷಕ ಸಂಘಕ್ಕೆ ಹೊಸ ರೂಪವನ್ನು ಕೊಟ್ಟಂತ ವ್ಯಕ್ತಿ ಮತ್ತು ಶಿಕ್ಷಕರನ್ನು ರಾಷ್ಟ್ರಮಟ್ಟದಲ್ಲಿ ಜೋಡಿಸಿ ಶಿಕ್ಷಕರ ಅನೇಕ ಸಮಸ್ಸೆಗಳಿಗೆ ಪರಿಹಾರ ಕಲ್ಪಿಸಿಕೊಟ್ಟಂತ ವ್ಯಕ್ತಿ ರಘು ಅವರು ಎಂದರು. ಹೊಸತನ ತರುವುದು, ಹೊಸ ವಿಚಾರಗಳನ್ನು ಕಾರ್ಯಕರ್ತರನ್ನು ತಯಾರು ಮಾಡುವುದು ಮತ್ತು ನಿರಂತರವಾಗಿ ನಡೆಯುತ್ತಿರುವ ಶಿಕ್ಷಕ ಸಂಘದ ಅಭಿವೃದ್ಧಿಕಾರ್ಯದಲ್ಲಿ ಅವರ ಪಾತ್ರ ಮಹತ್ವದ್ದಾಗಿದೆ ಎಂದರು. ಸಂಘಟಕ ಎಂದರೆ ಎಲ್ಲರನ್ನೂ ಜೊತೆಗೆ ತೆಗೆದುಕೊಂಡು ಹೋಗುವ ಮತ್ತು ಎಲ್ಲರ ಸುಖ ದುಃಖದಲ್ಲಿ ತೊಡಗಿಸಿಕೊಳ್ಳುವ ವ್ಯಕ್ತಿತ್ವ ಹೊಂದಿರಬೇಕು ಮತ್ತು ಅಂತಃ ವ್ಯಕ್ತಿತ್ವ ಹೊಂದಿರುವಂತವರು ಅಕಮಂಚಿಯವರು ಎಂದರು. 40 ವರ್ಷಗಳ ಕಾಲ ಒಂದು ವಿಚಾರ ಮತ್ತು ಒಂದು ಧ್ಯೇಯಕ್ಕಾಗಿ ಮತ್ತು ಆದರ್ಶ ಕಾರ್ಯಕರ್ತರಾಗಿ ಸೇವೆ ಸಲ್ಲಿಸಿ ಸಾಮಾಜಿಕವಾಗಿ ಎಲ್ಲ ತರಹದ ನೋವು ನಲಿವುಗಳನ್ನು ಅನುಭವಿಸಿದ ವ್ಯಕ್ತಿತ್ವ ರಘು ಅಕಮಂಚಿಯವರದ್ದು ಎಂದು ಹೇಳಿದರು. ರಘು ಅವರು ಪ್ರಾಚಾರ್ಯರಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದರೆ ಸಂಘಟನೆಗೊಂದು ತೂಕ ಬರುತಿತ್ತು, ಮತ್ತು ಅವರನ್ನು ಪ್ರಾಚಾರ್ಯರಾಗಿಸಿಕೊಳ್ಳುವ ಪುಣ್ಯ ಆ ಕಾಲೇಜಿಗಿಲ್ಲ ಎಂದು ಬೇಸರಪಟ್ಟರು.

ಕೇಂದ್ರ ಸಚಿವರಾದ ಶ್ರೀ ಪ್ರಲ್ಹಾದ ಜೋಶಿ ಅವರು ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡುತ್ತ, ವಿದ್ಯಾರ್ಥಿ ಪರಿಷತ್ ನಲ್ಲಿಯೇ ತುಂಬಾ ಶ್ರಮಿಸಿದಂತ ಜೀವ ಅಕಮಂಚಿಯವರದ್ದು ಎಂದರು, ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಅನೇಕ ದುಂಡು ಮೇಜಿನ ಸಭೆಗಳನ್ನು ಮತ್ತು ಅದಕ್ಕೆ ಸಲಹೆ ಸೂಚನೆಗಳನ್ನು ನೀಡಿದ ವ್ಯಕ್ತಿತ್ವ ಇವರದ್ದು ಎಂದು ಸ್ಮರಿಸಿದರು. ಅತ್ಯುತ್ತಮ ವ್ಯಕ್ತಿತ್ವ ನಿರ್ವಹಿಸಿದ ವ್ಯಕ್ತಿ ಡಾ. ರಘು ಅಕಮಂಚಿ ಅವರದ್ದು, ಅವರು ಪ್ರಾಚಾರ್ಯರಾಗಿ ಸೇವೆ ಸಲ್ಲಿಸಿದ್ದರೆ ಆ ಮಹಾವಿದ್ಯಾಲಯವು ಕೂಡ ಬೆಳಿತಿತ್ತು ಎಂದು ಹೇಳಿದರು.

ಅ.ಭಾ.ವಿ.ಪ ನ ಮಾಜಿ ರಾಷ್ಟ್ರೀಯ ಅಧ್ಯಕ್ಷರಾದ ಪ್ರೊ. ಪಿ.ವಿ ಕೃಷ್ಣ ಭಟ್ ಅತ್ಯಂತ ತೀವ್ರವಾದ ಸಾಮಾಜಿಕ ಕಳಕಳಿ ಹೊಂದಿದಂತ ವ್ಯಕ್ತಿ ಡಾ. ರಘು ಅವರದ್ದು ಎಂದು ಹೇಳಿದರು. ಕುಟುಂಬ, ರಾಜಕೀಯ ಮತ್ತು ಸಾಮಾಜಿಕ ಜೀವನದಲ್ಲಿ ಹೇಗೆ ತೊಡಗಿಕೊಳ್ಳ ಬೇಕು ಎಂಬ ಆದರ್ಶ ಹೊಂದಿದವರು ಅವರು ಎಂದು ಹೇಳಿದರು. ವಿದ್ಯಾರ್ಥಿಗಳ ಜೊತೆ ಆತ್ಮೀಯವಾಗಿ ಭಾಗಿಯಾಗುವಾದರ ಜೊತೆಗೆ ವಿದ್ಯಾರ್ಥಿಗಳಿಗೆ ಆದರ್ಶಮಯವಾಗಿ ಜೀವನ ರೂಪಿಸುವ ಕಾರ್ಯವನ್ನು ಮತ್ತು ವಿದ್ಯಾರ್ಥಿಗಳಿಗೆ ಉತ್ತಮ ಮಾರ್ಗದರ್ಶಕರಾಗಿ ಸೇವೆ ಅಲ್ಲಿಸಿರುವುದನ್ನು ಸ್ಮರಿಸಿದರು. ಅಧ್ಯಾಪಕ ಸಂಘಗಳು ಕೂಡ ಟ್ರೇಡ್ ಯೂನಿಯನ್‌ಗಳಾಗಿದ್ದಾಗ ಶಿಕ್ಷಣಕ್ಕೆ ಒಂದು ಒಳ್ಳೆ ಗುಣಾತ್ಮಕ ಕೊಡುಗೆ ನೀಡುವುದಕ್ಕಾಗಿ ಶಿಕ್ಷಕರನ್ನು ಸಮಾಜ ಬೆಳಗಿಸುವ ನಿಟ್ಟಿನಲ್ಲಿ ಕೆಆರ್ ಎಂ ಎಸ್ ಸಂಸ್ಥಾಪಕ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ ಎಂದು ಹಾರೈಸಿ ಅವರ ನಿವೃತ್ತಿ ಜೀವನ ಸುಖಕರವಾಗಿರಲಿ ಎಂದು ಹೇಳಿದರು.

ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಜಗದೀಶ್ ಶೆಟ್ಟರ್ ಮಾತನಾಡುತ್ತ, ವಿದ್ಯಾರ್ಥಿ ಸಂಘಟನೆಗಳಲ್ಲಿ ಪ್ರಾಮಾಣಿಕರಾಗಿ ಮತ್ತು ನಿಷ್ಠಾವಂತರಾಗಿ ಕಾರ್ಯವನ್ನು ಸರಿಯಾದ ರೀತಿಯಲ್ಲಿ ನಿರ್ವಹಿಸುವಂತಹ ವ್ಯಕ್ತಿತ್ವ ರಘು ಅಕಮಂಚಿಯವರದು ಎಂದರು. ರಾಜನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜ್ ಕಟ್ಟಡ ಆಗಬೇಕೆಂದರೆ ಅಕಮಂಚಿಯವರ ಪಾತ್ರ ಬಹಳ ಇದೆ. ಮತ್ತು ಕೋವಿಡ್ ಸಂದರ್ಭದಲ್ಲಿ 24 ಗಂಟೆಗಳ ಕಾಲ ಸೇವೆ ಸಲ್ಲಿದ್ದನ್ನು ನಾವು ಸ್ಮರಿಸಲೇಬೇಕು ಎಂದು ಹೇಳಿದರು.

ಸಂಘದ ಹಿರಿಯರಾದ ಜಿ.ಆರ್ ಜಗದೀಶ್ ಅವರು ಮಾತನಾಡುತ್ತಾ, ಜೀವನದಲ್ಲಿ ಅನೇಕ ಸಂಘಟನೆಗಳಲ್ಲಿ ನಿಸ್ವಾರ್ಥದಿಂದ ಸೇವೆ ಸಲ್ಲಿಸಿ, ಕಷ್ಟಕಾರ್ಪಣ್ಯಗಳನ್ನು ಮತ್ತು ಅನೇಕ ಪೆಟ್ಟುಗಳನ್ನು ತಿಂದು ಇಂದು ಸಮಾಜಮುಖಿಯಾಗಿ, ಶೈಕ್ಷಣಿಕ ಕ್ಷೇತ್ರದಲ್ಲಿ ಅಪಾರ ಸಾಧನೆ ಮಾಡಿರುವ ವ್ಯಕ್ತಿತ್ವ ಶ್ರೀ ರಘು ಅಕಮಂಚಿಯವರದ್ದು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಸಭಾಪತಿಗಳಾದ ಶ್ರೀ ಬಸವರಾಜ ಹೊರಟ್ಟಿ, ಹಿರಿಯ ಪ್ರಚಾರಕರಾದ ಶ್ರೀಧರ್ ನಾಡಿಗೇರ, ಕೆ.ಎಲ್.ಇ. ಕುಲಪತಿಗಳಾದ ಡಾ. ಅಶೋಕ್ ಶೆಟ್ಟರ್, ಎಬಿಆರ್‌ಎಸ್‌ಎಂನ ಸಹ ಸಂಘಟನಾ ಕಾರ್ಯದರ್ಶಿ ಶ್ರೀ ಜಿ ಲಕ್ಷ್ಮಣ, ರವರು ರಘು ಅಕಮಂಚಿಯವರೊಂದಿಗಿನ ತಮ್ಮ ಸಾಮಾಜಿಕ ಜೀವನವನ್ನು ವೇದಿಕೆಯಲ್ಲಿ ಸ್ಮರಿಸಿಕೊಂಡರು.

ಕಾರ್ಯಕ್ರಮದಲ್ಲಿ ಕೆ.ಎಸ್‌ಎಸ್ ಸಂಸ್ಥಾಪಕ ಕಾರ್ಯದರ್ಶಿಗಳಾದ ರವಿ ದಂಡಿನ, ಡಾ. ವಿಜಯ ಸಂಕೇಶ್ವರ, ಶ್ರೀ ಶಂಕರಣ್ಣ ಮುನವಳ್ಳಿ, ಜಿ ಎನ್ ಚಿಕ್ಕಮಠ, ಪ್ರೊ ಬಿ.ಕೆ ತುಳಸಿಮಾಲಾ, ಕವಿವಿ ಕುಲಪತಿಗಳಾದ ಡಾ. ಕೆ.ಬಿ ಗುಡಸಿ, ಶಾಸಕ ಮಹೇಶ ಟೆಂಗಿನಕಾಯಿ, ಕೆ.ಆರ್‌ಎಂ.ಎಸ್.ಎಸ್ ಗೌರವಾಧ್ಯಕ್ಷರಾದ ಶ್ರೀ ಅರುಣ ಶಹಾಪೂರ ಹಾಗೂ ವಿವಿಧ ಮಹಾವಿದ್ಯಾಲಯಗಳ ಪ್ರಾಚಾರ್ಯರು ಮತ್ತು ಉಪನ್ಯಾಸಕ ವೃಂದ ಕಾರ್ಯಕ್ರಮದಲ್ಲಿ ನೂರಾರು ಸಂಖ್ಯೆಯಲ್ಲಿ ಹಾಜರಿದ್ದರು.

ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ಮಹಾವಿದ್ಯಾಲಯ ಶಿಕ್ಷಕ ಸಂಘದ ರಾಜ್ಯ ಅಧ್ಯಕ್ಷರಾದ ಡಾ. ಗುರುನಾಥ ಬಡಿಗೇರ ಪ್ರಾಸ್ತಾವಿಕ ನುಡಿ ನುಡಿದರು. ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ರಾಜ್ಯಾಧ್ಯಕ್ಷರಾದ ಶ್ರೀ ಸಂದೀಪ ಬೂದಿಹಾಳ ಸ್ವಾಗತಿಸಿದರು. ಪ್ರಸನ್ನ ಪಂಡ್ರಿ ಪರಿಚಯಿಸಿದರು. ಡಾ. ಸಿ.ವಿ ಮರಿದೇವರಮಠ ನಿರೂಪಿಸಿದರು.

MAG(3)/NPP/23/2020-21 Registered No. RNI 45459/85 Posted at Bangalore PSO Bangalore -560 026
Date of Publishing : 17-09-2024 Date of Posting 20th or 21st of every month Posted at Periodical Rate

# ಚಿತ್ರ ಸುದ್ದಿ



ಕರ್ನಾಟಕ ರಾಜ್ಯ ಅನುದಾನಿತ ಪಿಂಚಣಿ ವಂಚಿತ ಶಾಲಾ ಕಾಲೇಜುಗಳ ಸಂಘದ ನೇತೃತ್ವದಲ್ಲಿ, ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ, ಪದವಿಪೂರ್ವ ಮಹಾವಿದ್ಯಾಲಯಗಳ ನೌಕರರ ಸಂಘ, ಮಾಧ್ಯಮಿಕ ಶಾಲಾ ನೌಕರರ ಸಂಘ, ಪ್ರಾಚಾರ್ಯರ ಸಂಘ, ಬಿ ಎಡ್ ಕಾಲೇಜು ನೌಕರರ ಸಂಘ ಹಾಗೂ ಆಡಳಿತ ಮಂಡಳಿ ನೇತೃತ್ವದಲ್ಲಿ ನಿಶ್ಚಿತ ಪಿಂಚಣಿ ಜಾರಿಗಾಗಿ ಆಗ್ರಹಿಸಿ ಧಾರವಾಡ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು.



ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ ಮಂಡ್ಯ ಜಿಲ್ಲೆಯ ಗುರುವಂದನಾ ಕಾರ್ಯಕ್ರಮ ಹಾಗೂ ಕಾರ್ಗಿಲ್ ರಜತ ಮಹೋತ್ಸವ ಸಮಾರಂಭ ಅನಿಕೇತನ ಸ್ಕೂಲ್, ಮಂಡ್ಯದಲ್ಲಿ ನಡೆಯಿತು.



ಬೆಂಗಳೂರು ಉತ್ತರ ಜಿಲ್ಲೆ, ಬೀದರ್ ಮತ್ತು ಮೈಸೂರಿನಲ್ಲಿ ನಡೆದ ಗುರುವಂದನಾ ಕಾರ್ಯಕ್ರಮ



ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ(ರಿ.) ಬೆಂಗಳೂರು, ಕಾರ್ಯಕಾರಣಿ ಮತ್ತು ಸಾಮಾನ್ಯ ಸಭೆ



ಬೆಂಗಳೂರು ದಕ್ಷಿಣ ಜಿಲ್ಲೆ ಮತ್ತು ಬೆಂಗಳೂರು ಉತ್ತರ ಜಿಲ್ಲೆಯ ಪ್ರತಿಭಾ ಪುರಸ್ಕಾರ

IF UNDELIVERED PLEASE RETURN TO SENDER

Printed By :
J. M. Joshi
Karnataka Rajya Madhyamika Shikshaka Sangha ®.)
Published By:
J. M. Joshi
Karnataka Rajya Madhyamika Shikshaka Sangha (R.)
Owned By : J. M. Joshi
on behalf of Karnataka Rajya Madhyamika Shikshaka Sangha (R.)

Printed At: Rashtrotthana Mudranalaya,
'Keshava Shilpa', Kempegowda Nagar, Bengaluru -560 019

Published By : Karnataka Rajya Madhyamika Shikshaka Sangha (R.)
# 55, 'Yadavasmurthi', 1st Main, Sheshadripuram, Bengaluru -560 020

Editor : J. M. Joshi, Karnataka Rajya Madhyamika Shikshaka Sangha (R.), Bengaluru -20

srushtidesigns@gmail.com